ಅಚಲ

ತಿಂಗಳ ಪತ್ರಿಕೆ

ಫೆಬ್ರವರಿ 2002

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ
ಸಂಪುಟ - 17 ಸಂಚಿಕೆ - 2
ಸಂಪಾದಕ ಮಂಡಲಿ
ಎನ್. ಗಾಯತ್ರಿ
ನೇಮಿಚಂದ್ರ, ದೇವಿ,
ಬಿ. ಎನ್. ಸುಮಿತ್ರಾಬಾಯಿ
ಶಾಂತಾನಾಗರಾಜ್
ಹೆಚ್. ಎನ್. ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು
ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೇ,

ಹೊಸ ವರ್ಷದ ಶುಭಾಷಯಗಳು

ಕಳೆದ 16 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ.ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ. ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ :

ವಾರ್ಷಿಕ ಚಂದಾ : ರೂ. 40/- (ವ್ಯಕ್ತಿಗಳಿಗೆ)
ರೂ. 75/- (ಸಂಸ್ಥೆಗಳಿಗೆ)
ಅಜೀವ ಚಂದಾ : ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಗಮನಿಸಿ
ಅಚಲ ವಿಳಾಸ ಬದಲಾಗಿದೆ
108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ಪೋಲಿಸ್ ದೌರ್ಜನ್ಯದ ಬೆಂಕಿಯಲ್ಲಿ ನರಳಿದ ಮಹಿಳೆಯರು

ಇತ್ತೀಚೆಗೆ ನ್ಯಾಯಮೂರ್ತಿ ಸದಾಶಿವ ಆಯೋಗದ ಮುಂದೆ ಸಾಕ್ಷಿಹೇಳಲು ಬಂದ ಹಲವಾರು ನೊಂದವರ ನೂರಾರು ನೋವಿನ ಮೂಟೆಗಳು ಪತ್ರಿಕೆಗಳಲ್ಲಿ ವಿಸ್ತೃತವಾಗಿ ಬಿಚ್ಚಿಕೊಂಡಿವೆ. ಕುಖ್ಯಾತ ನರಹಂತಕ ವೀರಪ್ಪನನ ವಿರುದ್ಧದ ಕಾರ್ಯಾಚರಣೆಯಲ್ಲಿ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ತಮಿಳುನಾಡಿನ ಕೊಳತ್ತೂರು ಹಾಗೂ ಕರ್ನಾಟಕ ಹಾಗೂ ತಮಿಳುನಾಡು ಗಡಿ ಪ್ರಾಂತ್ಯಗಳ ನೆಲ್ಲೂರು, ಜಲ್ಲಿ ಪಾಳ್ಯಂ, ಗೋಪಿನಾಥಂ, ಕೊಟ್ಟಯೊರು ಮುಂತಾದ ಹಳ್ಳಿಗಳಿಂದ ಸುಮಾರು 150ರಷ್ಟು ಜನರು ಭಾಗವಹಿಸಿದ್ದರು. ಇವರೆಲ್ಲಾ ವೀರಪ್ಪನ್ ವಿರುದ್ಧ ಕಾರ್ಯಾಚರಣೆ ನಡೆಸುತ್ತಿರುವ ವಿಶೇಷ ಕಾರ್ಯಾಚರಣೆ ವಿರುದ್ಧ ಕಣ್ಣೀರ ಕತೆಗಳನ್ನು ಬಿಚ್ಚಿದರು. ಎಸ್.ಟಿ.ಎಫ್ ಪೋಲೀಸರು ಯಾವ ದೌರ್ಜನ್ಯವನ್ನು ನೆಡೆಸಿಲ್ಲ. ಜನರೆಲ್ಲಾ ದುಡ್ಡಿನ ಆಸೆಯಿಂದ ಕತೆ ಕಟ್ಟುತ್ತಿದ್ದಾರೆ, ಎಂಬ ಅಭಿಪ್ರಾಯವನ್ನು ಬಿಂಬಿಸಲು ಪೋಲಿಸ್ ವಲಯಗಳಲ್ಲಿ ಪ್ರಯತ್ನ ಕೂಡ ಮಾಡಲಾಯಿತು. ಹಾಗೆಯೇ ಪೋಲಿಸರು ಸದಾಶಿವ ಆಯೋಗದ ಕಲಾಪಕ್ಕೆ ಅನಗತ್ಯವಾಗಿ ತಡೆಯೊಡ್ಡುವುದು, ಪಾಟಿ ಸವಾಲು ಮಾಡುವ ಮೂಲಕ ತನಿಖೆಯನ್ನು ವಿಳಂಬಗೊಳಿಸಿ ಹೆಚ್ಚು ಜನರು ಹೇಳಿಕೆ ನೀಡದಂತೆ ಮಾಡುವ ತಂತ್ರಗಳನ್ನು ಹೂಡುತ್ತಿದ್ದಾರೆ, ಎಂದು ಸ್ವಯಂ ಸೇವಾ ಸಂಘಟನೆಗಳು ದೂರಿಟ್ಟವು.

ಇವೆಲ್ಲಾ ಅಂಶಗಳ ಸತ್ಯಾಸತ್ಯತೆಯೇನೇ ಇರಲಿ, ಸದಾಶಿವ ಆಯೋಗದ ಮುಂದೆ ಹೆಂಗಳೆಯರು ಕಣ್ಣೀರುಗರೆಯುತ್ತಾ ನಿವೇದಿಸಿದ ಕತೆಗಳು ಯಾವ ಮರ್ಯಾದಸ್ಥ ಸಮಾಜಕ್ಕೂ ಶೋಭೆ ತರುವಂತಹುದಲ್ಲ. ಹಾಗೆಯೇ ಭವ್ಯ ಸಂಸ್ಕೃತಿ ತಮ್ಮದೆಂದು ಹೆಮ್ಮೆ ಪಡುವ ದೇಶದ ಅಂತಸ್ಸತ್ವಕ್ಕೆ ಕೊಳ್ಳಿಯಿಡುವ ಬರ್ಬರ ಘಟನೆಗಳಿವು.

ವೀರಪ್ಪನ್‌ನ ಸುಳಿವು ಪಡೆಯಲೆಂದು ಹಳ್ಳಿಗಳೊಳಗೆ ನುಗ್ಗಿ ಬಡವರ ಮತ್ತು ಹೆಂಗಸರು ಮಕ್ಕಳೆನ್ನದೆ ಸಿಕ್ಕ ಎಲ್ಲ ಜನರನ್ನು ಒದ್ದು ಕರೆದುಕೊಂಡು ಬಂದು 'ವರ್ಕ್‌ಶಾಪ್' ಎನ್ನುವ ಯಾತನಾಶಿಬಿರದಲ್ಲಿ ಎಸ್.ಟಿ.ಎಫ್ ಪೋಲಿಸರು ನೀಡುತ್ತಿದ್ದ ನರಕಯಾತನೆಯ ಚಿತ್ರ ಸದಾಶಿವ ಆಯೋಗದ ಕಾರ್ಯಾಚರಣೆಯಲ್ಲಿ ಸ್ಪಷ್ಟವಾಗುತ್ತದೆ. ಮನೆಗಳೊಳಗೆ ನುಗ್ಗಿ ಅಲ್ಲಿದ್ದ ಬಟ್ಟೆ ಬರೆ, ಒಡವೆಗಳನ್ನು ದೋಚಿ ಅವರನ್ನು ನಿರ್ಗತಿಕರನ್ನಾಗಿ ಮಾಡಿದ್ದಲ್ಲದೆ ವರ್ಕ್‌ಷಾಪ್‌ಗೆ ಕರೆದುಕೊಂಡು ಬಂದ ಮೇಲೆ ಅಮಾನುಷವಾಗಿ ಚಿತ್ರ ಹಿಂಸೆ ನೀಡಿದ್ದಲ್ಲದೆ ಹೆಂಗಸರ ಮೇಲೆ ಅತ್ಯಾಚಾರವನ್ನು ನಡೆಸಲಾಗಿದೆ. ಸಿಗರೇಟಿನಿಂದ ಸುಡುವುದೇ ಅಲ್ಲದೆ. ಎಲ್ಲ ರೀತಿಯ ಚಿತ್ರಹಿಂಸೆಯನ್ನು ಆ ಜನಕ್ಕೆ ನೀಡಿ ಪೋಲೀಸ್ ಮತ್ತು ಸರ್ಕಾರದ ಬಗ್ಗೆ ವಿಶ್ವಾಸವೇ ಇಲ್ಲದಂತಹ ಸ್ಥಿತಿಗೆ ಅವರನ್ನು ದೂಡಲಾಗಿದೆ. ಈ ಚಿತ್ರಹಿಂಸೆಯ ಜೊತೆಗೆ ಬದುಕುಳಿದ ಎಳೆಯರು, ಯುವಕರನ್ನು ಟಾಡಾ ಕಾಯ್ದೆಯನ್ವಯ ವರ್ಷಾನುಗಟ್ಟಲೆ ಸೆರೆಮನೆಯಲ್ಲಿ ಕೊಳೆಯುವಂತೆ ಮಾಡಿ ಅವರ ಬದುಕನ್ನೇ ಹೊಸಕಿ ಹಾಕಿರುವ ನಮ್ಮ ಸರ್ಕಾರಗಳ ನೈತಿಕ ಮೌಲ್ಯ ಎತ್ತ ಸಾಗಿದೆ, ಎಂದು ನಾವೆಲ್ಲ ಅಚ್ಚರಿ ಪಡಬೇಕಾಗಿದೆ. ಈ ದಿಕ್ಕಿನಲ್ಲಿ ಶಾಂತಿ, ಶಿಸ್ತು ಕಾಪಾಡುವ ಹೆಸರಿನಲ್ಲಿ ಪೋಲಿಸ್ ಯಂತ್ರ ನಡೆಸುವ ಎಲ್ಲ ದೌರ್ಜನ್ಯಗಳ ವಿರುದ್ಧ ಪ್ರತಿಭಟಿಸಬೇಕಾದ್ದು ಎಲ್ಲ ಪ್ರಜಾಪ್ರಭುತ್ವ ಪ್ರೇಮಿಗಳ ಆದ್ಯ ಕರ್ತವ್ಯವಾಗಬೇಕಿದೆ.

ಎನ್. ಗಾಯತ್ರಿ

ಅಪೂರ್ವ ಅಭಿನೇತ್ರಿ : ತೃಪ್ತಿಮಿತ್ರ

-ಜ್ಯೋತ್ಸ್ನಾ ಕಾಮತ್

ನನ್ನ ಕಲಕತ್ತಾವಾಸದ ದಿನಗಳಲ್ಲಿ, ಸಾಧ್ಯವಾದ ಬಿಡುವಿನ ವೇಳೆಯಲ್ಲಿ, ಬಂಗಾಲಿ ಜನಜೀವನ, ಸಾಹಿತ್ಯ-ಸಂಗೀತ ಪ್ರಕಾರಗಳನ್ನು ತಿಳಿದುಕೊಳ್ಳುವ ಯತ್ನದಲ್ಲಿ ಕಳೆಯುತ್ತಿದ್ದೆ. ತಕ್ಕಮಟ್ಟಿಗೆ ಬಂಗಾಲಿ ಓದಲು, ಹಿಂದಿ ಬೆರೆಸಿ ಬಂಗಾಲಿ ಮಾತನಾಡಲು ಕಲಿತೆ. ನೃತ್ಯ-ನಾಟಕ-ಜಾತ್ರಾ ಪ್ರಯೋಗಗಳನ್ನು ನೋಡಿದೆ. ಬಂಗಾಲಿ ರಂಗಭೂಮಿಯಲ್ಲಿ ನನ್ನ ಹೆಚ್ಚಿನ ಆಸಕ್ತಿಯನ್ನು ಬಲ್ಲ ಮತ್ತು ಹಿಂದೊಮ್ಮೆ ಪ್ರಸಿದ್ಧ 'ಬಹುರೂಪಿ' ನಾಟಕ ತಂಡದ ಸಕ್ರಿಯ ಸದಸ್ಯೆಯಾಗಿದ್ದ ಆರತಿ ಮೈತ್ರ, ಒಂದು ದಿನ ಮಹಿಳೆಯೊಬ್ಬರನ್ನು ನನ್ನ ಆಫೀಸರೂಮಿಗೆ ಕರೆದುಕೊಂಡು ಬಂದರು.''ದೀದಿ, ಇವರನ್ನು ಗುರುತಿಸಬಲ್ಲಿರಾ? ನೀವು ಹಲವು ಬಾರಿ ಇವರ ಕುರಿತು ವಿಚಾರಿಸಿದ್ದಿರಿ!'' ಎಂದಳು.

ಕಣ್ಣೆತ್ತಿ ನೋಡಿದೆ. ತೃಪ್ತಿ ಮಿತ್ರ ಎದುರಿಗೆ ನಿಂತಿದ್ದರು! ಮುಖದಲ್ಲಿ ಮಾಯವಾಗದ ಮಂದಹಾಸ. ಮಾತು ಹೊಳೆಯದೇ ನಮಸ್ಕರಿಸಿ ಕೈ ತೋರಿದ ಕುರ್ಚಿಯಲ್ಲಿ ಹಂಸದಂತೆ ತೇಲಿಹೋಗಿ ಹಗುರಾಗಿ ಕುಳಿತರು.

ಒಂದೇ ವಾರದ ಹಿಂದೆ ಬಾದಲ್ ಸರ್ಕಾರ್ ಅವರ ಸುಪ್ರಸಿದ್ಧ ನಾಟಕ 'ಬಾಕಿ ಇತಿಹಾಸ'ದ 'ಬಹುರೂಪಿ'ಯ ಪ್ರಯೋಗವನ್ನು ನೋಡಿದ್ದೆ. ಹವ್ಯಾಸಿ ರಂಗಭೂಮಿಯಲ್ಲಿ ಕೆಲವರ್ಷಗಳ ಹಿಂದೆ ಚರಿತ್ರೆಯನ್ನೇ ನಿರ್ಮಿಸಿದ ನಾಟಕ. ಅದರಲ್ಲೂ ವಾಸಂತಿಯ ಪಾತ್ರ ವೈಶಿಷ್ಟ್ಯಪೂರ್ಣವಾಗಿತ್ತು. ಪತಿಯ, ಸಮಾಜದ ಇಬ್ಬಂದಿತನದೊಂದಿಗೆ 'ಪಾಪ ಪ್ರಜ್ಞೆ'ಯನ್ನು ಅರ್ಥೈಸಲು ಹವಣಿಸುವ ಸೂಕ್ಷ್ಮ ಸಂವೇದಾನಾಶೀಲತೆಗಳನ್ನು ಅತ್ಯಪೂರ್ವವಾಗಿ ಆ ಪಾತ್ರವಹಿಸಿದಾಕೆ ಅಭಿನಯಿಸಿದ್ದಳು. ಮೇಕಪ್‌ನಲ್ಲಿ ಸುಂದರವಾಗಿ ತೋರುತ್ತಿದ್ದಳು.

ಆದರೆ ಈಗ, ಅದೇ ತೃಪ್ತಿಮಿತ್ರ. ಐವತ್ತೆರಡು ವಸಂತಗಳನ್ನು ದಾಟಿದ ಮಹಿಳೆ, ಇಲ್ಲಿದ್ದರು. ೨೫ ರ ತರುಣಿಯನ್ನು ನಾಚಿಸುವಂತಹ ಕಳೆ ಹೊಂದಿದ್ದರು. ತೆಳುವಾದ ಎತ್ತರ ಮೈಕಟ್ಟು, ಮಿರಿ ಮಿರಿ ಮಿಂಚುವ ತಲೆಗುದಲು. ಮುಖದ ಮೇಲೆ ವಯಸ್ಸನ್ನು ತೋರುವ ಒಂದಾದರೂ ಸುಕ್ಕಾಗಲಿ, ಗೆರೆಯಾಗಲಿ ಇರಲಿಲ್ಲ. ಮೇಕಪ್ ಅಂತೂ ಇಲ್ಲವೇ ಇಲ್ಲ. ಕಂದುಬಣ್ಣ. ರೂಪಸಿಯಲ್ಲದಿದ್ದರೂ ಆಕರ್ಷಕ ವ್ಯಕ್ತಿತ್ವ, ಕನ್ನಡಕದ ಹಿಂದಿನಿಂದ ಮಿನುಗುವ, ಭಾವಪೂರ್ಣ ಕಣ್ಣುಗಳು. ಚೀತರಿಸಿಕೊಂಡು ಸಾವಿರಾರು ಅಲ್ಲ, ಲಕ್ಷ ಲಕ್ಷ ಜನರನ್ನು ತನ್ನ ಅಭಿನಯ ಸಾಮರ್ಥ್ಯದಿಂದ ಮುಗ್ಧಗೊಳಿಸಿದ ಕಲಾವಿದೆಯೋ? ಅಲ್ಲ! ಅವರ ಮಗಳು ಇರಬೇಕು! ಅಂದೆ.

ತೃಪ್ತಿದಿ ಗಹಗಹಿಸಿ ನಕ್ಕರು. ಅವರು ಮಗಳು ಶಾವೊಲಿ ಅದಾಗಲೇ ಉತ್ತಮ ನಟಿಯೆಂದು ಹೆಸರು ಮಾಡಿದ್ದರೂ, ನಾನು ಪರೋಕ್ಷವಾಗಿ ಅವರ ತಾರುಣ್ಯ ಹೊಗಳಿದ್ದನ್ನು ಕ್ಷಣದಲ್ಲಿ ಅರ್ಥಮಾಡಿಕೊಂಡಿದ್ದರು!

'ಬಾಕಿ ಇತಿಹಾಸ್ ಹೇಗೆನಿಸಿತು?'

ಭೀಷಣ್ ಶುಂದರ್! (ತುಂಬ ಚೆನ್ನಾಗಿತ್ತು!) ನಾನೆಂದೆ. ''ಬಾದಲ್‌ರು ಚಿತ್ರಿಸಿದ್ದಕ್ಕಿಂತ ಹೆಚ್ಚಿನ ಆಯಾಮಗಳನ್ನು ಸ್ತ್ರೀ ಮನಸ್ಸಿನ ತುಮುಲಗಳಿಗೆ ಕೊಡಮಾಡಿರುವಿರಿ!''

ಮತ್ತೆ ಎಳೆತನದ ಕುಲುಕುಲು ನಗು.

''ಹೊಸ ಆಯಾಮಗಳು, ಬಹುಮುಖಗಳು ಎಂದಿರಾ? ನೀವು 'ಅಪರಾಜಿತಾ' ನೋಡಬೇಕು! ಇನ್ನೆರಡುವಾರ ಬಿಟ್ಟು ''ಅಕ್ಯಾಡಮಿ ಆಫ್ ಫೈನ್ ಆರ್ಟ್ಸ' ರಂಗಮಂದಿರದಲ್ಲಿದೆ. ಮುದ್ದಾಂ ಬನ್ನಿ''ಆಗ್ರಹಿಸಿದರು.

'ಅಪರಾಜಿತಾ'ದಲ್ಲಿ ತಾನೊಬ್ಬ ಅಭಿನೇತ್ರಿಯಾಗಬೇಕು ಎಂದು ಕನಸುಕಂಡ ಅಪೂ ಅಥವಾ ಅಪರಾಜಿತಾ ಎಂಬ ತರುಣಿ, ನಾಟಕ/ ಚಲಚ್ಚಿತ್ರದಲ್ಲಿ ಅವಕಾಶ ಕಲ್ಪಿಸಿಕೊಡುವೆನೆಂದು ಆಶ್ವಾಸನೆ ಕೊಟ್ಟ ಆಪ್ತಬಂಧುವಿನ ಫೋನಿಗಾಗಿ ಕಾಯುತ್ತಿರುತ್ತಾಳೆ. ಆ ಕಾಯುವಿಕೆಯ, ಸಂದರ್ಭದಲ್ಲಿ ಕೆಲವು ನಾಟಕಗಳ ಡಾಯಲೋಗ್‌ಗಳನ್ನು ಹೇಳಿಕೊಳ್ಳುತ್ತಾ, ಟಾಗೋರರ ಪದ್ಯಗಳನ್ನು ಪಠಿಸುತ್ತ, ತನ್ನ ಜೀವನದ ಹಲವಾರು ಆಗು-ಹೋಗುಗಳನ್ನು ನೆನಪಿಸಿಕೊಳ್ಳುತ್ತಾಳೆ. ತಂದೆ,ತಾಯಿ, ಅಣ್ಣ, ಅತ್ತಿಗೆ, ಸ್ನೇಹಿತರು, ನೆರೆ-ಹೊರೆಯವರೊಡನೆ ತನಗಾದ ಅನುಭವಗಳನ್ನೆಲ್ಲ ಹೇಳಿಕೊಳ್ಳುತ್ತಾಳೆ. ರೇಲ್ವೆಸ್ಟೇಶನ್ ದೃಶ್ಯ (ವಿವಿಧ ಮಾರಾಟಗಾರರು), ಇಲೆಕ್ಷನ್ ಸ್ಟಂಟ್‌ಗಳು, ವ್ಯಾಪಾರಿ, ಮುತ್ಸದ್ದಿ-ರಾಜಕಾರಣಿ, ಸರಕಾರಿ ನೌಕರ, ಅಜ್ಜ, ಡಾಕ್ಟರು, ನೆರೆಯ ಅಧಿಕಪ್ರಸಂಗಿ, ಹೀಗೆ ಸುಮಾರು ಇಪ್ಪತ್ತು, ಇಪ್ಪತ್ತೈದು ಪಾತ್ರಗಳು, ಪ್ರೇಕ್ಷಕರಿಗೆ ಪರಿಚಯಿಸಲ್ಪಡುತ್ತಾರೆ. ಪ್ರತಿಭೆಯಿದ್ದೂ ಹೆಣ್ಣಾಗಿ ಹುಟ್ಟಿದ ತಪ್ಪಿಗೆ ಮನೆಯ ಒಳಗೂ ಹೊರಗೂ ಯಾವುದೇ ಪ್ರೋತ್ಸಾಹ ದೊರೆಯದೇ ಅವಳ ಸಂಗೀತ ಪ್ರೇಮ, ಅಭಿನಯ ಕೌಶಲ್ಯಗಳು ಮಣ್ಣುಗೂಡಿ ಹೋಗುವದರಲ್ಲಿದ್ದಾಗ, ಈ ಸಂಜೀವಾದಾ ಎಂಬ ಆಪ್ತನ ಭರವಸೆ, ಒಂದೇ ಉಳಿದಿದೆ. ಕೊನೆಗೂ ದಿನವಿಡೀ ಯಾರ ಟೆಲಿಫೋನ್‌ಗೆ ಕಾದಿದ್ದಳೋ ಆ ಕರೆ ಬರುತ್ತದೆ. ಒಂದು ಕಂಡಿಶನ್‌ಗೆ ಆಕೆ ಒಪ್ಪುವದಿದ್ದರೆ ಹಾತೋರೆಯುತ್ತಿದ್ದ ಪಾತ್ರ ದೊರೆಯುವದು ಖಂಡಿತ! ಅದು ಚಲಚಿತ್ರವೂ ಆಗುವದರಲ್ಲಿದೆ! ಹಿಗ್ಗಿ ಹೋದ ಅಪೂ, ಕರಾರು ಯಾವುದ? ಎಂದು ಕೇಳುತ್ತಿದ್ದಂತೆ ಕಪ್ಪಿಟ್ಟ ಮುಖ, ಸಿಟ್ಟು, ಹತಾಶಾಭಾವಗಳೆಲ್ಲ ಒಂದೊಂದಾಗಿ ಆವರಿಸಿ ಕೊನೆಗೆ ಕುಟ್ಟಿದ

ಪೋನಿನಿಂದಾಗಿ ಕರಾರಿನ ಕರಾಳ ರೂಪದ ಪರೋಕ್ಷ ಪರಿಚಯ, ಪ್ರೇಕ್ಷಕರಿಗೆ ಆಗುತ್ತದೆ.

ಕೇವಲ ವರದಿಯಂತೆ ಭಾಸವಾಗುವ ಅಷ್ಟೊಂದು ಪಾತ್ರಗಳ ಧ್ವನಿ-ಸಂಭಾಷಣೆಗಳನ್ನೆಲ್ಲ ಅನುಕರಿಸುವ ಓರ್ವಳೇ ನಟಿ ರಂಗದ ಮೇಲೆ! ಧ್ವನಿ ಸಂಯೋಜನೆ, ಸಂಗೀತಗಳು ಅತ್ಯಲ್ಪವಾಗಿದ್ದವು. ಕೇವಲ ಧ್ವನಿಯ ಏರಿಳಿತ ಹಾಗೂ ಅಭಿನಯಕೌಶಲ್ಯದಿಂದ ತೃಪ್ತಿಯವರು ಎರಡುವರೆ ಗಂಟೆಕಾಲ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿದ್ದರು.

ನಾಟಕ ನೋಡಿಯಾದ ಮೇಲೆ ಇಂಗ್ಲಿಷಿನಲ್ಲಿ ಅವರಿಗೆ ಪತ್ರ ಬರೆದೆ. ಅದನ್ನೋದಿ ತೃಪ್ತಿದಿ ತುಂಬ ಸಂತೋಷಪಟ್ಟು, ''ನಿಮ್ಮ ಪತ್ರಕ್ಕೆ ಕೃತಜ್ಞೆಗಳನ್ನು ಪತ್ರದಿಂದಲೇ ತಿಳಿಸುವ ಶಕ್ತಿ ನನ್ನಲ್ಲಿಲ್ಲ! ಆದರೆ ನನ್ನ ಇತರ ನಾಟಕ ಹಾಗೂ ನಿರ್ದೇಶನಗಳನ್ನು ನೀವು ನೋಡಿ, ಇಂಥ ಪತ್ರಗಳನ್ನು ಬರೆದು ನಿಮ್ಮ ಅನಿಸಿಕೆಗಳನ್ನು ತಿಳಿಸಿದರೆ ನನಗೆ ತುಂಬ ಸಂತೋಷವಾಗುತ್ತದೆ. ಹೊಸ ಆಯಾಮಗಳು ಹೊಳೆಯುತ್ತವೆ! ಎಂದು ಫೋನಿಸಿದರು. ಇದೇ ಸಂದರ್ಭವನ್ನು ಬಳಸಿ, ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡಿ, ಅವರ ಜೀವನಸಾಧನೆಗಳ ಕುರಿತು ತಿಳಿದುಕೊಳ್ಳುವ ಉತ್ಕಟ ಬಯಕೆಯಿದೆ ಎಂದೆ! ಕೂಡಲೇ ತಾವು ಬಿಡುವಾಗಿರುವ ಸಮಯವನ್ನು ತಿಳಿಸಿ ತಮ್ಮ ಮನೆ ತಲುಪಲು ಮಾರ್ಗ ನಿರ್ದೇಶನ ಕೊಟ್ಟರು.

ನಸಿರುದ್ದೀನ್ ಸ್ಟ್ರೀಟ್‌ದಲ್ಲಿರುವ ಅವರ ಪುಟ್ಟ ಫ್ಲ್ಯಾಟಿಗೆ ಹೋದಾಗ, ನನಗಾಗಿ ಕಾಯುತ್ತಲೇ ಇದ್ದರು. ೧೪ 'x'೧೨ 'ಉದ್ದಗಲದ ಅವರ ಹೊರಕೋಣೆ, ಒಂದು ಬೆಡ್‌ರೂಂ ಹಾಗೂ ಚಿಕ್ಕ ಅಡಿಗೆಮನೆಯ ನಿವಾಸದಲ್ಲಿ ಕಳೆದ ಮೂವತ್ತು ವರ್ಷಗಳಿಂದ ವಾಸವಾಗಿದ್ದರು. ನಂದಲಾಲ್ ಬೋಸರ ಟಾಗೋರ ಚಿತ್ರದ ಪ್ರತಿಕೃತಿ ಹಾಗೂ ಬಂಗ್ಲಾದೇಶದ ಪ್ರಸಿದ್ಧ ಚಿತ್ರಕಾರ ಝೈನ್-ಉಲ್-ಅಬೀದೀನರ ಒಂದು ತೈಲಚಿತ್ರ, ಹಾಗೂ ಮಿತ್ರ ದಂಪತಿಗಳಿಗೆ ದೊರೆತ ಒಂದೆರಡು ಪ್ರಶಸ್ತಿ ಪತ್ರಗಳು ಬಿಟ್ಟರೆ ಇನ್ನಾವ ಅಲಂಕಾರಿಕ ಮಸ್ತುವೂ ಹೊರಕೋಣೆಯಲ್ಲಿರಲಿಲ್ಲ.

'ನಿಮ್ಮ ಈ ಡ್ರಾಯಿಂಗ್ ರೂಮು. ಅದೆಷ್ಟು ನಾಟಕ ಸಂಯೋಜನೆಗಳಿಗೆ, ಯಶೋಗಾಥೆಗಳಿಗೆ ಮೂಕಸಾಕ್ಷಿಯಾಗಿದೆಯೋ'ನಾನೆಂದೆ.

''ನಿಜ! ನಮ್ಮ ಎಲ್ಲ ಮೊದಲಿನ ನಾಟಕಗಳು ರೂಪತಾಳಿದ್ದು ಇಲ್ಲಿಯೇ. 'ಬಹುರೂಪಿ' ತನ್ನದಾದ ಅಫೀಸು ಪಡೆಯುವ ತನಕ ಇದೇ ಆಫೀಸು, ರಿಹರ್ಸಲ್ ರೂಮು, ರಿಸೆಪ್ಶನ್ ಹಾಲು, ಭಿನ್ನಾಭಿಪ್ರಾಯ,, ಮೂಕರೋದನಗಳಿಗೂ ಸಾಕ್ಷಿಯಾಗಿದೆ! ನಗುತ್ತಲೇ ತೃಪ್ತಿದಿ ಉತ್ತರಿಸಿದರು. ಕೆಲಸದಾಕೆಗೆ ಹೇಳಿ, ಬಂಗಾಲಿ ಪದ್ಧತಿಯ ಸೇವಿಗೆ ಉಪ್ಪಿಟ್ಟು ಮಾಡಿಸಿದರು. ಮಿಠಾಯಿಗಳು ಇದ್ದವು. ಚಹಾಪಾನವಾದ ಮೇಲೆ ಅವರ ತೆಳುಮೈಕಟ್ಟಿನ ಬಗ್ಗೆ ವಿಚಾರಿಸಿದೆ. ಅಚ್ಚಕಪ್ಪಾದ ಕೂದಲ ಕುರಿತು ಕೇಳಿದೆ.

''ಹುಟ್ಟಾ ನಾನು ಇರುವದೇ ಹೀಗೆ! ಕೇವಲ ನಾಟಕವನ್ನೇ ಅವಲಂಬಿಸಿದ ನಾವು ಹೊಟ್ಟೆಗಿಲ್ಲದೇ ಮಲಗಿದ ರಾತ್ರಿಗಳು ಅದೆಷ್ಟೋ! ಆ ಬಳಿಕ ಅನುಕೂಲ ದಿನಗಳು ಬಂದಾಗ ಶಂಭು (ಪತಿ ಶಂಭುಮಿತ್ರ) ಪ್ರಯತ್ನಪೂರ್ವಕ ಆಹಾರ ಕುಗ್ಗಿಸಿ, ಸಕ್ಕರೆ-ಹಾಲು ಇಲ್ಲದೇ ಚಹ ಸೇವಿಸಿ ತನ್ನ ಮೈಕಟ್ಟು ಉಳಿಸಿಕೊಂಡರು. ನನಗೆ ಆ ಪ್ರಮೇಯ ಬರಲೇ ಇಲ್ಲ! ಅನ್ನ-ಮೀನು ನನ್ನ ಆಹಾರ. ಇತ್ತೀಚೆಗೆ ರಾತ್ರಿ ಅನ್ನ ಬಿಟ್ಟು ಗೋದಿರೊಟ್ಟಿ ತಿನ್ನುವಂತೆ, ಹಾಲು ಕುಡಿಯುವಂತೆ ಡಾಕ್ಟರರು ಹೇಳಿದ್ದಾರೆ. ನನಗೆ ಎರಡೂ ಇಷ್ಟವಿಲ್ಲ.

ನನ್ನ ಅಜ್ಜಿ, ತಾಯಿ ಇಬ್ಬರಿಗೂ ಎಪ್ಪತ್ತು ದಾಟಿದರೂ ತಲೆಕೂದಲು ಕಪ್ಪಾಗಿತ್ತು! ನನಗೂ ಸುದೈವದಿಂದ ಅದು ವರವಾಗಿದೆ. ಮೊದಲು ತುಂಬ ದಪ್ಪವೂ ಉದ್ದವೂ ಇತ್ತು. ಯುರೋಪು ಯಾತ್ರೆಯಲ್ಲಿ ಬಹಳಷ್ಟು ಕೂದಲು ಉದುರಿತು. ಆ ಮೇಳೆ ನಾಟಕದ ಹೊತ್ತಿಗೆ 'ವಿಗ್' ಧರಿಸಲು ಪ್ರಾರಂಭಿಸಿದೆ! ಎಂದರು. ಅವರ ಅಭಿನಯ ಜೀವನದ ವಿವರಗಳನ್ನು ಒಂದೊಂದಾಗಿ ಪಡೆಯಲಾರಂಭಿಸಿದೆ.

ಇಂದು ಬಂಗ್ಲಾದೇಶಕ್ಕೆ ಸೇರಿಹೋದ ಠಾಕೂರ್‌ಗಾಂವ್ (ಡಾಕ್ಕಾಜಿಲ್ಲೆ)ದ ಮಧ್ಯಮವರ್ಗದ ಬ್ರಾಹ್ಮಣ ಮನೆತನದಲ್ಲಿ ತೃಪ್ತಿಯವರ ಜನನ ೧೯೨೫ ರಲ್ಲಾಯಿತು. ಹಾಯಸ್ಕೂಲು ಮುಗಿಸಿ ಡಾಕ್ಟರ್ ಆಗುವ ಕನಸು ಹೊತ್ತು ಕಲಕತ್ತೆಗೆ ಬಂದ ತರುಣಿಯ ಬದುಕಿನ ಆದರ್ಶ ಬದಲಾಗಲಿಕ್ಕೆ ೧೯೪೩ ರ ಭೀಕರ ಬರಗಾಲ ಕಾರಣವಾಯಿತು. ಎರಡನೆಯ ಮಹಾಯುದ್ಧ ಕಾಲದಲ್ಲಿ ಬಂಗಾಲದ ಪೂರ್ವಭಾಗ ಜಪಾನೀ ಆಕ್ರಮಣಕ್ಕೆ ತುತ್ತಾಗ ಬಹುದೆಂಬ ಭೀತಿಯಿಂದಲೇ ಯಾವ ಪೂರ್ವಯೋಜನೆಯಿಲ್ಲದೇ ಅಲ್ಲಿಯ ಸರಕಾರ ಮುಖ್ಯ ಸಾರಿಗೆ ಸಂಪರ್ಕವಾಗಿದ್ದ ನೌಕಾಯಾನಕ್ಕೆ ತಡೆಹಾಕಿಬಿಟ್ಟಿತು. ಯಾತಾಯಾತ ನಿಂತೇ ಹೋಗಿ ಲಕ್ಷಗಟ್ಲೆ ಜನ ಹಸಿವಿನಿಂದ ಸತ್ತರು. ಅಷ್ಟೇ ಸಂಖ್ಯೆಯಲ್ಲಿ ಕಲಕತ್ತೆಗೆ ಗುಳೇ ಬಂದ ಜನ ಇಲ್ಲಿಯೂ ಆಹಾರ- ಆಶ್ರಯಗಳಿಲ್ಲದೇ ಸಾಯಲಾರಂಭಿಸಿದರು. ಕಾಲೇಜಿಗೆ ಸೇರಿದ್ದ ತೃಪ್ತಿ, ನಿರಾಶ್ರಿತರ ಸಂಕಟನಿವಾರಣಾಯತ್ನದಲ್ಲಿ ಸ್ವಯಂಸೇವಿಕೆಯಾಗಿ ಸೇರಿಕೊಂಡಳು. ಹಸಿವು, ನೋವು ನರಳಾಟ, ಸಾವುಗಳ ಕ್ರೂರ ರೂಪ, ಪ್ರತ್ಯಕ್ಷ ಕಂಡಳು. ಗಂಜಿಯ ಕೇಂದ್ರದಲ್ಲಿ ವಾಲಂಟಿಯರ ಆಗಿದ್ದಾಗ, ಎಷ್ಟೋದಿನ ಉಪವಾಸವಿದ್ದು ಏಳಲು ಶಕ್ತಿಯಿಲ್ಲದ ಹೆಣ್ಣುಮಗಳಿಗೆ, ಬಾಯಲ್ಲಿ ಗಂಜಿ ಹಾಕುತ್ತಿದ್ದಂತೆ ಪ್ರಾಣಬಿಟ್ಟಿದ್ದಳು. ಮುದುಕಿಯೊಬ್ಬಳು ಗಂಜಿನೋಡಿ ಖುಷಿಯಿಂದ ನಕ್ಕು, ಒಂದು ಗುಟುಕು ನುಂಗುತ್ತಿದ್ದಂತೆ ಕುಸಿದುಬಿದ್ದಿದ್ದಳು.

ಕಲಕತ್ತೆಯ ಬೀದಿ ಬೀದಿಗಳಲ್ಲಿ ಮಿಠಾಯಿ ಅಂಗಡಿಗಳು ಇದ್ದವು. ಧ್ಯಾನತುಂಬಿದ ಅಂಗಡಿಗಳಿದ್ದವು. ಬರುತ್ತಿದ್ದವರು ಸಹಸ್ರ ಸಹಸ್ರಜನ. ಅವರಾರೂ ಸಂಘಟಿತರಾಗಿ ತಿಂಡಿಯಂಗಡಿಗಳನ್ನಾಗಲಿ ಆಹಾರಧ್ಯಾನ್ಯವನ್ನಾಗಲಿ ಲೂಟಿ ಮಾಡಲಿಲ್ಲ. ಕೆಲವರು ಭಿಕ್ಷೆ ಬೇಡುತ್ತಿದ್ದರು. ಹಲವರು ಇಂಥ

ಅಂಗಡಿಗಳ ಬದಿಯಲ್ಲಿ ಬಿದ್ದು ಸಾಯುತ್ತಿದ್ದರು. ಪೂರ್ವ ಬಂಗಾಲದ ಹಳ್ಳಿಯೊಂದರ ಗಡಿಯಲ್ಲಿ ಅಸ್ಥಿಪಂಜರಗಳ ರಾಶಿಯನ್ನೇ ಕಂಡ ಈ ತರುಣಿಯಲ್ಲಿ ವಿದ್ರೋಹದ ಕಲ್ಪನೆ ಜಾಗೃತವಾಯಿತು. ಈ ಬರಗಾಲ, ಪೂರ್ತಿಯಾಗಿ ಮಾನವ ನಿರ್ಮಿತ ದುರಂತವಾಗಿತ್ತು. ಎರಡು ಸಾಮ್ರಾಜ್ಯಶಾಹಿ ದೇಶಗಳ ನಡುವೆ ಮಹಾತ್ವಾಕಾಂಕ್ಷೆಯ ಯುದ್ಧವಾದರೆ ನಿರಪರಾಧಿ ಕೃಷಿಕರು, ಗ್ರಾಮಸ್ಥರು, ಹೆಂಗಸರು, ಮಕ್ಕಳು, ಸಹಸ್ರ-ಸಹಸ್ರ ಸಂಖ್ಯೆಯಲ್ಲಿ ಸಾಯಬೇಕೇಕೆ? ನೆರೆ ಹಾವಳಿ, ಭೂಕಂಪ, ಚಂಡಮಾರುತಗಳಂಥ ನೈಸರ್ಗಿಕ ಪ್ರಕೋಪಗಳಿಗೆ ನಮ್ಮ ಜನ ಅಭ್ಯಸ್ಥರಾಗಿದ್ದಾರೆ! ಆದರೆ ಇಂಥ ಅನಿರೀಕ್ಷಿತ ಕೃತ್ರಿಮ ಆರ್ಥಿಕ ದುರ್ಘಟನೆಗಳನ್ನು ಎದುರಿಸುವ ತ್ರಾಣ ಬಡಪಾಯಿಗಳಲ್ಲಿ ಎಲ್ಲಿಂದ ಬರಬೇಕು?

ಅಂದಿನಿಂದ ಮಾನವನಿಂದ ಮಾನವನ ಶೋಷಣೆಯ ಹಲವಾರು ಮುಖಗಳನ್ನು ತೃಪ್ತಿಯವರು ಕಾಣುತ್ತಲೇ ಬೆಳೆದರು. ಕಲಾತ್ಮಕವಾಗಿ ಪ್ರತಿಕ್ರಿಯಿಸುತ್ತಲೇ ಬಂದರು. ಅವರ ಆಪ್ತರೂ ಪ್ರಸಿದ್ಧ ಬಂಗಾಲಿ ನಾಟಕಕಾರರೂ ಆಗಿದ್ದ ಬಿಜನ್ ಭಟ್ಟಾಚಾರ್ಯ (ಜ್ಞಾನಪೀಠ ವಿಜೇತ ಮಹಾಶ್ವೇತಾದೇವಿಯವರ ಪತಿ)ರು ಬರೆದ 'ಆಗುನ್' (ಬೆಂಕಿ) ಹೊಸ ತಂತ್ರದ ನಾಟಕ ಪ್ರಯೋಗವಾಗಿತ್ತು. ನಾಯಕಿಯ ಪಾತ್ರ ವಹಿಸಬೇಕಾಗಿದ್ದ ಹುಡುಗಿ ಕೊನೆಗಳಿಗೆಯಲ್ಲಿ ಕೈಕೊಟ್ಟದ್ದರಿಂದ. ಭಟ್ಟಾಚಾರ್ಯರು ನಿರುಪಾಯರಾಗಿ, ತೃಪ್ತಿಯ ಪಾಲಕರ ಮನಸ್ಸನ್ನು ಒಲಿಸಿ, ಪ್ರಥಮತಃ ನಾಯಕ್ಕಿಯ ಪಾತ್ರ ನೀಡಿ ರಂಗಪ್ರವೇಶ ಮಾಡಿಸಿದರು. ಆ ನಾಟಕ ಅತ್ಯಂತ ಯಶಸ್ವಿಯಾಯಿತು. ಮುಂದೆ ಅವರು ಬರಗಾಲದ ವಸ್ತುವನ್ನು ಹೊಂದಿದ 'ನವಾನ್ನ' ಎಂಬ ನಾಟಕ ಬರೆದು. ಅದಾಗಲೇ ಪ್ರಸಿದ್ಧ ನಟರೆಂದು ಖ್ಯಾತರಾಗಿದ್ದ ತರುಣ ಶಂಭುಮಿತ್ರರ ನೆರವಿನಿಂದ ನಿರ್ದೇಶಿಸಿದರು. ಅದರಲ್ಲಿ ತೃಪ್ತಿಯ ಪಾತ್ರವನ್ನು ಮೆಚ್ಚಿಕೊಂಡು ಖ್ಯಾತ ಲೇಖಕ. ಚಲಚ್ಚಿತ್ರ ನಿರ್ದೇಶಕ ಕೆ.ಎ. ಅಬ್ಬಾಸ್ ಅವರು ಮುಂಬೈಗೆ ಆಮಂತ್ರಿಸಿ ತಮ್ಮ 'ಧರ್ತಿಕೇ ಲಾಲ್' ಚಿತ್ರದಲ್ಲಿ ಮಹತ್ವದ ಪಾತ್ರವನ್ನೇ ಕೊಟ್ಟಿದ್ದರು. ಆದರೆ ಚಲಚ್ಚಿತ್ರ ಪ್ರಪಂಚದ ಕೃತ್ರಿಮ ಜೀವನ ಒಗ್ಗದೇ ತೃಪ್ತಿ ಕಲಕತ್ತೆಗೆ ಮರಳಿದರು. ಶಂಭುಮಿತ್ರರ ಸ್ನೇಹ, ಪ್ರಣಯ ಮುಂದೆ ವಿವಾಹದಲ್ಲಿ ಸಂಪನ್ನವಾಯಿತು.

ಉತ್ಸಾಹಿ ಮಿತ್ರದಂಪತಿಗಳು ಆಗ ಭಾರತದ ಮಹತ್ವದ ನಗರಗಳಲ್ಲೆಲ್ಲ ತಲೆಯೆತ್ತಿದ ಇಂಡಿಯನ್ ಪೀಪಲ್ಸ್ ಥಿಯೇಟ್ರಿಕಲ್ ಆಸೋಸಿಯೇಶನ್ ಅಥವಾ 'ಇಪ್ಟಾ'ದ ಸಕ್ರಿಯ ಸದಸ್ಯರಾಗಿ ರಂಗ ಚಳುವಳಿಯಲ್ಲಿ ಭಾಗವಹಿಸಿದ್ದರು. ಹಲವಾರು ಪ್ರತಿಭಾವಂತರನ್ನು ಆಗ ಇಪ್ಟಾ ಆಕರ್ಷಿಸಿತ್ತು.'ರಂಗಪ್ರಯೋಗಗಳಿಂದ ಜನಜಾಗೃತಿ' ಎಂಬ ಸಾಮಾಜಿಕ ಆದರ್ಶ ಅವರನ್ನೆಲ್ಲ ಬೆಸೆದಿತ್ತು/ ವೈಯಕ್ತಿಕ ಸುಖದುಃಖಗಳು ಗೌಣವಾಗಿ ನಿಸ್ಪೃಹರಾಗಿ ದುಡಿದು, ಜನರಿಗಾಗಿ ದುಡಿದೇವು ! ಎಂಬ ಆದರ್ಶವಿತ್ತು.

ಈ ರಂಗಚಳುವಳಿಯಿಂದಾಗಿ ವಂಗರಂಗಕ್ಕೆ ಹೊಸ ತಿರುವು ಒದಗಿತ್ತು. ಅಲ್ಲಿಯವರೆಗೆ ಎಲ್ಲವೂ ಪೌರಾಣಿಕ, ಐತಿಹಾಸಿಕ ನಾಟಕಗಳು, ಥಳಕಿನ ವೇಷಭೂಷಣಗಳು, ಬೆಳಕಿನ ಥಾಟು, ಬೆಡಗಿನ ಸೀನರಿಗಳು ಉತ್ತಮ ನಾಟಕದ ಜೀವನವೆಂದು ಜನ ನಂಬಿದ್ದರು. 'ಇಪ್ಟಾ'ದ ನಾಟಕ ಪ್ರಯೋಗಗಳಲ್ಲಿ ಬಡ ಒಕ್ಕಲಿಗರು, ಕಾರ್ಮಿಕರ ಹೆಂಗಸರು ಮುಖ್ಯ ಪಾತ್ರಗಳಲ್ಲಿ ಕಾಣಿಸಿಕೊಂಡರು. ಹರಕುಬಟ್ಟೆ ಧರಿಸಿ, ಮೈಗೆ ಮಣ್ಣು ಮೆತ್ತಿಕೊಂಡು, ಕಲ್ಲಿದ್ದಲ ಮಸಿಯನ್ನು ಮೇಕಪ್‌ಗೆ ಬಳಸಿ, ಗ್ರಾಮ್ಯಭಾಷೆ ರೂಡಿಸಿಕೊಳ್ಳುವುದು ಹೊಸ ಅಹ್ವಾನವಾಗಿತ್ತು. ಮಹಾನಗರದಲ್ಲಿ ಇಂಗ್ಲೀಷ್ ಶಿಕ್ಷಣ ಪಡೆದ 'ಭದ್ರ ಮ್ಯೊಲಾ' (ಕುಲೀನ ಮಹಿಳೆ)ರಿಗಂತೂ ರೋಮಾಂಚಕಾರಿ ಅನುಭವ ಒದಗಿಸಿದರೆ ಅಕ್ರಮಸಾಗಾಟಗಾರರು, ಕಾಳಸಂತೆಖೋರರು, ಪರಿಸ್ಥಿತಿಗೆ ಕಣ್ಣು ಮುಚ್ಚಿಕೊಂಡು ಇರುವ ಬುದ್ಧಿಜೀವಿಗಳ ನಿರ್ದಾಕ್ಷಿಣ್ಯ ಟೀಕೆಯಿಂದಾಗಿ ಎಲ್ಲ ವರ್ಗದ ಜನರಲ್ಲಿ ನಾಟಕ ಮಾಧ್ಯಮ ಹಿಂದೆಂದಿಗಿಂತಲೂ ಜನಪ್ರಿಯವಾಗಿ ನಟ-ನಟಿಯರಿಗೆ ಪ್ರತಿ ಪ್ರದರ್ಶನ ಹೊಸ ಅನುಭವ ನೀಡುತ್ತಿತ್ತು. ಅವಿಭಕ್ತ ಬಂಗಾಲ, ಆಸ್ಸಾಮ, ಯು.ಪಿ.ಯ ಕೆಲ ನಗರಗಳಲ್ಲಿ ಬಯಲಿನಲ್ಲಿ ಆಡಿದ ನಾಟಕಗಳಿಗೆ ಏಳುಸಾವಿರದವರೆಗೂ ಜನ ನೆರೆದದ್ದು ಇತ್ತು. ನವಜಾಗೃತಿಯಲ್ಲಿ ಪಾಲ್ಗೊಂಡ ಅನುಭವ ಮಿತ್ರ ದಂಪತಿಗಳದ್ದಾಯ್ತು.

ಕ್ರಮೇಣ 'ಇಪ್ಟಾ'ದ ಮೇಲೆ ಕಮ್ಯುನಿಸ್ಟಪಾರ್ಟಿಯ ಒತ್ತಡ ಬೀಳಲಾರಂಭಿಸಿತು. ಒಂದು ರಾಜಕೀಯ. ಪ್ರಣಾಲಿಗೆ ಕಲಾವಿದರು ಬಲಿ ಬಿದ್ದರೆ ಮೌಲಿಕತೆ ನಾಶವಾಗುತ್ತದೆ. ತತ್ವ ಮುಂದಾಗಿ ಕಲೆ ಹಿಂದೆ ಬೀಳುತ್ತದೆ ಎಂದು ಮನಗಂಡ ಮಿತ್ರ ದಂಪತಿ, ಇಪ್ಟಾದಿಂದ ಹೊರಬಿದ್ದರು.

ತಮ್ಮದೇ ಹವ್ಯಾಸಿ ನಾಟಕಸಂಸ್ಥೆ ಬಹುರೂಪಿಯನ್ನು ೧೯೪೮ ರಲ್ಲಿ ಸ್ಥಾಪಿಸಿದರು.

ಈಗ ತೃಪ್ತಿಯವರ ಅಭಿನಯಕ್ಕೆ ಹೊಸ ಆಯಾಮುಗಳು ಒದಗಿದವು. ಆ ತನಕ ರವೀಂದ್ರನಾಥ ಟಾಗೋರರ ಕೆಲವು ನಾಟಕಗಳನ್ನು ರಂಗಕ್ಕೆ ತರುವ ಸಾಹಸವನ್ನು ಯಾರೂ ಮಾಡಿರಲಿಲ್ಲ. ಅವರ ನಾಟಕಗಳೆಲ್ಲ ಕಾವ್ಯಮಯ. ಅವುಗಳೊಳಗಿನ ಧ್ವನಿ ಹಾಗೂ ಸಂವೇದನೆಗಳು ಓದಿಯೋ ಪಠಿಸಿಯೋ ಅನುಭವಿಸುವಂಥವು. ರಂಗಪ್ರಯೋಗಕ್ಕೆ ಹೊರತಾದವು! ಎಂದೇ ಸಾಮಾನ್ಯ ಕಲ್ಪನೆಯಾಗಿತ್ತು. ಆದರೆ ಬಹುರೂಪಿ ತಂಡದವರ 'ರಕ್ತಕರವಿ, ಮುಕ್ತಧಾರಾ, ರಾಜಾ, ನಾಲ್ಕು ಅಧ್ಯಾಯಗಳು' ರಂಗಕ್ರಾಂತಿಯನ್ನೆ ಎಸಗಿದವು. ರವೀಂದ್ರ ಸಾಹಿತ್ಯದ ಮೇಲೆ ಶಂಭುಮಿತ್ರರಿಗಿದ್ದ ಹಿಡಿತ, ವಿಶ್ಲೇಷಣೇ ಹಾಗೂ ಉಗ್ರ ರಂಗನಿಷ್ಠೆಗಳು ಬಹುರೂಪಿಯ ಸದಸ್ಯರನ್ನು ಕಟೆಕಟೆದು ತಯಾರಿಸಿದ್ದವು.

ಜೊತೆಗೆ ಗ್ರೀಕ್ ನಾಟಕ ಈಡಿಪಸ್, ಇಬ್ಸೆನ್‌ನ ಪುತಲ್ ಖೇಲಾ (ಗೊಂಬೆ ಮನೆ) ವಿಜಯ್ ತೆಂಡುಲ್ಕರ್ ಅವರ ''ಚೊಪ್! ಅದಾಲತ್ ಚೊಲಚ್''(ಸದ್ದು ವಿಚಾರಣೆ ನಡೆಯುತ್ತಿದೆ!) ಬಾದಲ ಸರಕಾರರ ''ಬಾಕಿ ಇತಿಹಾಸ'', ''ಪಗ್ಲಾ

ಘೋಡಾ'' (ಹುಚ್ಚು ಕುದುರೆ)ಗಳಲ್ಲೆಲ್ಲ'' ತೃಪ್ತಿದಿ ಮುಖ್ಯಪಾತ್ರ ವಹಿಸುವಂತಾಯ್ತು. ಎಲ್ಲವೂ ಅತ್ಯಂತ ಯಶಸ್ವಿಪ್ರಯೋಗಗಳಾಗಿ, ಭಾರತದ ಅನೇಕ ನಗರಗಳಲ್ಲಿ, ವಿದೇಶಗಳಲ್ಲಿ ಹೆಸರುಗಳಿಸಿದವು.

ಆದರೆ ಕೇವಲ ಕಲಾನಿಷ್ಠೆಯಿಂದ ಹೊಟ್ಟೆ ತುಂಬಲಾರದು ! ಅತ್ಯಂತ ನಿರಾಡಂಬರ ಜೀವನ ನಡೆಸಿದರೂ ಸಾಂಸಾರಿಕ ನಿರ್ವಹಣೆ ಕಠಿಣವಾದಾಗ ತೃಪ್ತಿಯವರು ವೃತ್ತಿರಂಗದಲ್ಲಿ ಅಭಿನೇತ್ರಿಯಾಗಿ ಸೇರಿಕೊಂಡರು. ಅಲ್ಲಿಯೂ ತಮ್ಮ ಪ್ರತಿಭೆ ಮೆರೆದರು. ಅವರು ನಾಯಕಿಯಾಗಿ ನಟಿಸಿದ 'ಸೇತು' ನಾಟಕ ಒಂದು ಸಹಸ್ರ ಪ್ರಯೋಗಗಳನ್ನು ಕಂಡು ವಿಕ್ರಮ ಸ್ಥಾಪಿಸಿತು. ವಂಗದೇಶದ ಶ್ರೇಷ್ಠ ನಟಿ ಎಂಬ ಪ್ರಶಸ್ತಿ ತೃಪ್ತಿಯವರಿಗೆ ಸ್ಥಿರವಾಯಿತು.

೧೯೭೭ರಲ್ಲಿ ಮ್ಯಾಗ್ಸೇಸೇ ಪ್ರಶಸ್ತಿ ಬಂದನಂತರ ಶಂಭುಮಿತ್ರರು ಇಚ್ಛಾಪೂರ್ವಕ ಬಹುರೂಪಿಯಿಂದ ನಿವೃತ್ತರಾದರು. ಮೂರು ದಶಕ ಕಾಲ ಶ್ರಮಿಸಿದರೂ ತಮ್ಮದೊಂದು ಪುಟ್ಟ ಪ್ರಾಯೋಗಿಕ ನಾಟಕಶಾಲೆ ಕಟ್ಟಲಾಗಲಿಲ್ಲವೆಂಬ ಕೊರಗು, ಮಿತ್ರ ದಂಪತಿಗಳನ್ನು ಕೊರೆಯುತ್ತಲೇ ಕೊನೆಗುಂಡಿತು. ಆ ಬಳಿಕ ತೃಪ್ತಿದಿ ಅವರೇ ಬಹುರೂಪಿಯ ಮುಖ್ಯಸ್ಥೆ ಆದರೂ ಆರ್ಥಿಕವಾಗಿ ಸಂಸ್ಥೆ ಯಶಸ್ಸು ಕಾಣಲೇ ಇಲ್ಲ! ಪ್ರತಿ ರವಿವಾರ ಬಹುರೂಪಿಯ ಒಂದು ನಾಟಕ ಪ್ರಯೋಗ ನಡೆದೇ ಇರುತ್ತಿತ್ತು, ಉಳಿದ ಹವ್ಯಾಸಿಸಂಸ್ಥೆಗಳು ವಾರದಲ್ಲೊಂದು ನಿಗದಿಪಡಿಸಿಕೊಂಡು ನಾಟಕವಾಡುವದು, ನಾನು ಕಲಕತ್ತೆಯಲ್ಲಿದ್ದಾಗ ವಾಡಿಕೆಯಾಗಿತ್ತು.

ತೃಪ್ತಿಮಿತ್ರ ಎರಡು ವರ್ಷಕಾಲ ಪ್ರೊಡ್ಯೂಸರ್ ಎಮೆರಿಟಸ್ ಎಂದು ಆಕಾಶವಾಣಿಯಲ್ಲಿ ನೇಮಿಸಲ್ಪಟ್ಟರು. ಆಗ ದಿಲ್ಲಿ ಇನ್ನಿತರ ಕೇಂದ್ರಗಳಲ್ಲಿ ಟಾಗೋರರ ನಾಟಕಗಳನ್ನು ಹಿಂದಿಯಲ್ಲಿ ನಿರ್ದೇಶಿಸಿದರು. ಇತರರ ನಾಟಕಗಳನ್ನೂ ನಿರ್ದೇಶಿಸಿದ್ದರು. ಆದರೆ ಅವಾವಕ್ಕೂ ಟಾಗೋರರ ನಾಟಕಗಳ ಔನ್ನತ್ಯ ಇಲ್ಲವೆನ್ನುತ್ತಿದ್ದರು. ರಾಜಾ, ರಕ್ತಕರವಿಗಳ ಒಂದೊಂದು ಡಾಯಲೊಗ್, ಒಂದೊಂದು ಶಬ್ದ ಕೂಡ, ಮಹತ್ವಪೂರ್ಣವಾಗಿವೆ! ನಾಟಕಗಳ ಔನ್ನತ್ಯ ಇಲ್ಲ ವೆನ್ನುತ್ತಿದ್ದರು ರಾಜಾ, ಓದಿದಾಗ ಪ್ರತಿಸಲ ಹೊಸ ಅರ್ಥ ಹೊರಡುತ್ತದೆ. ಅಷ್ಟೇಕೆ? ರಂಗದ ಮೇಲೆ ಅಭಿನಯಿಸುವಾಗ, ಕಲ್ಪನಾವಿಲಾಸ ಬೇರೆಯೇ! ಲೌಕಿಕ ಜಗತ್ತಿನಿಂದ ತುಂಬ ಎತ್ತರಕ್ಕೆ ಒಯ್ಯುವ ಯಾವುದೋ ಅನಿರ್ವಚನೀಯ ಭಾವ ಅವರ ಸಂವಾದಗಳಲ್ಲಿ ಇರುತ್ತದೆ.....''ಅವರ ನಾಟಕಗಳಲ್ಲಿ ನನ್ನ ಕ'ಲೆಯ ಸಾರ್ಥಕತೆ ಕಂಡೆ. ಟಾಗೋರರ ನಾಡಿನಲ್ಲಿ ಹುಟ್ಟಿ ಅವರು ಬರೆದ ನಾಟಕಗಳಲ್ಲಿ ನನ್ನ ಕಲೆಯ ಸಾರ್ಥಕತೆ ಕಂಡೆ. ಟಾಗೋರರ ನಾಡಿನಲ್ಲಿ ಹುಟ್ಟಿ ಅವರು ಬರೆದ ನಾಟಕಗಳಲ್ಲಿ ಅಭಿನಯಿಸುವಂತೆ ಆದದ್ದಕ್ಕೆ, ತುಂಬ ಹೆಮ್ಮೆ ಪಡುತ್ತೇನೆ!'' ಮನಸ್ಸು ತುಂಬಿ ತೃಪಿದಿ ನುಡಿದರು. ನನಗಾಗಿ ಟಾಗೋರರ 'ರಕ್ತಕರವಿ'ಯೊಳಗಿನ ಕೆಲಸಾಲುಗಳನ್ನು ಭಾವಪೂರ್ಣವಾಗಿ ಓದಿ ಹೇಳಿದರು. ಅದೊಂದು ರೋಮಾಂಚಕಾರಿ ಅನುಭವ.

''ಟಾಗೋರರ ಕೃತಿಗಳ ಹಿಂದಿ ಅನುವಾದ ಹೇಗಿತ್ತು? ಬಂಗಾಲಿ ಭಾಷೆಯ ನಿರ್ದೇಶನ, ಹಿಂದೀ ಭಾಷೆಯ ನಿರ್ದೇಶನಗಳಲ್ಲಿ ಏನು ಅಂತರ ಕಂಡಿರಿ? ಎಂದು ಕೇಳಿದೆ.

''ಹಿಂದೀ ಕೃತಿಯಲ್ಲಿ ಮೂಲ ಸತ್ವ ಬಂದಿಲ್ಲ! ಎಂದು ಎಷ್ಟೋ ಡಾಯಲೋಗ್‌ಗಳಲ್ಲಿ ಕಂಡಿದ್ದೆ! ಬಹುಶಃ ಅನುವಾದಕರು ಸ್ವತಃ ಕವಿಯಾಗಿರಬೇಕು.....ಬಹುಶಃ ಎಲ್ಲ ಬೇರೆ ಬೇರೆ ಪ್ರಸಿದ್ಧ ಲೇಖಕರ ಅನುವಾದಿತ ಕೃತಿಗಳಲ್ಲೂ ಮೂಲಕೃತಿಯ ಅಂತಃಸತ್ವದ ಕೊರತೆ ಇದ್ದಿರಲು ಸಾಕು! ಆದರೆ ಟಾಗೋರರರು ಮೂಲತಃ ಕವಿಗಳು. ಕಾವ್ಯಂಶವೆಂಬುದು ಅನುವಾದ ರೂಪದಲ್ಲಿ ಇಳಿದು ಬರುವುದು ಕಠಿಣ'' ಎಂದರು.

ಶ್ರೇಷ್ಠನಟರೆಂದು ಖ್ಯಾತರಾದರೂ ಶಿಸ್ತಿನ ಸಿಪಾಯಿ, ಅತ್ಯಂತ ನಿಷ್ಠುರರು ! ಎಂದು ಅಡ್ಡ ಹೆಸರನ್ನು ಹೊತ್ತ ಶಂಭುಮಿತ್ರರು ಅದಾಗಲೇ ಬೇರೆಯಾಗಿ ವಾಸಿಸುತ್ತಿದ್ದರು. ಬೇರ್ಪಟ್ಟ ನಂತರವೂ ರಂಗಸಂಬಂಧಿತ ಚಟುವಟಿಕೆಗಳಲ್ಲಿ ಇಬ್ಬರೂ ಜೊತೆಯಾಗಿ ಕೆಲಸ ಮಾಡುತ್ತಿದ್ದರು. ಆಗಿನ ಅವರ ಆತ್ಮೀಯ ಸಂಭಾಷಣೆ, ನಗೆಚಾಟಿಕೆ ಮುಂತಾದವನ್ನು ಕಂಡವರಲ್ಲಿ ದಾಂಪತ್ಯದ ಈ ಪರಿಯೂ ಉಂಟೆ? ಎಂದು ವಿಸ್ಮಯಪಟ್ಟವರುಂಟು. ಮತಭೇದದಿಂದಾಗಿ ಕಲಾವಿದ ದಂಪತಿಗಳು ಬೇರ್ಪಡುವದು ಇಂದಿನ ದಿನಗಳಲ್ಲಿ ಸಾಮಾನ್ಯವಾಗಿದ್ದರೂ, ಆಗ ತೃಪ್ತಿಮಿತ್ರರ ಜೀವನದಲ್ಲಿ ಅದು ಅಘಾತಕಾರಿಯಾಗಿ ಪರಿಣಮಿಸಿತು.

ತಡವಾಗಿಯಾದರೂ ತೃಪ್ತಿದಿ ಅವರಿಗೆ ಗೌರವಪ್ರಶಸ್ತಿಗಳು ಸಂದಾಯವಾಗತೊಡಗಿದವು. ಕೇಂದ್ರ ನಾಟಕ ಸಂಗೀತ ಆಕಾಡೆಮಿಯ ಫೆಲೋಶಿಪ್, ಪದ್ಮ ಶ್ರೀ, ವಿಶ್ವಭಾರತಿಯಲ್ಲಿ ಸಂದರ್ಶಕ ಫೆಲೋ ಇತ್ಯಾದಿ. ಕ್ಯಾನ್ಸರ್‌ದಿಂದ ಹಾಸಿಗೆ ಹಿಡಿದಾಕೆಗೆ ಕೊನೆಗಳಿಗೆಯಲ್ಲಿ ಕಾಳಿದಾಸ ಸನ್ಮಾನವನ್ನು ಮಧ್ಯಪ್ರದೇಶ ಸರಕಾರ, ಕಲಕತ್ತೆಯ ಅವರ ಮನೆಯಲ್ಲೇ ವಿಶೇಷ ಸಮಾರಂಭವೊಂದರಲ್ಲಿ ಕೊಡಮಾಡಿತು. ಕೇವಲ ಮೂರುವಾರಗಳ ಬಳಿಕ ಈ ಮಹಾನ್ ನಟಿ ೨೪ ನೇ ಮೇ ೧೯೮೯ ರಂದು ಚರಿತ್ರೆಗೆ ಸೇರಿ ಹೋದರು.

ಬಾದಲ್ ಸರ್ಕಾರರ ''ಜದಿ ಆರ್ ಏಕ್ ಬಾರ್''.... (ಇನ್ನೊಮ್ಮೆ ಘಟಿಸುವಂತಿದ್ದರೆ!) ಎಂಬ ವಿರೋಧಾಭಾಸಗಳ ನಗೆನಾಟಕವನ್ನು ತೃಪ್ತಿಮಿತ್ರ ಸಮರ್ಥವಾಗಿ ನಿರ್ದೇಶಿಸಿದ್ದರು. ಮೂರು ಹೊಂದಾಣಿಕೆ ಇಲ್ಲದ ಜೋಡಿಗಳು, ಸಮುದ್ರ ವಿಹಾರದ ತಾಣವೊಂದರಲ್ಲಿ ಆಕಸ್ಮಿಕವಾಗಿ ಭೇಟಿಯಾಗುತ್ತಾರೆ. ತಾತ್ಪೂರ್ತಿಕ ಪರಿಚಯುವಾಗಿದ್ದ ವಿರುದ್ಧ ಜೋಡಿಗಳು ಪರಸ್ಪರ ಆಕರ್ಷಿತರಾಗುತ್ತಾರೆ. ಆದರೆ ಕ್ಷಣಿಕ ಸಂಬಂಧಗಳಲ್ಲೂ ತೀವ್ರಕೊರತೆಗಳು ಎದುರ್ಕಾಣುವುದನ್ನು ಗಮನಿಸಿ ಪೂರ್ವಭಾವೀ ಸ್ಥಿತಿಗೆ ಮರಳುತ್ತಾರೆ. ಸಂಗೀತ. ಅಭಿನಯ. ವಾಕ್‌ಚಾತುರ್ಯಗಳಲ್ಲಿ ಮಾದರಿಯಾಗಿದ್ದ ನಿರ್ದೇಶನದಂತಹ ಈ ಘಟನೆ ತೃಪ್ತಿಮಿತ್ರರ ಬಾಳಿನಲ್ಲಿ ಎಂದೂ ಘಟಿಸಲಿಲ್ಲ! ಆರ್ಥಿಕ ಕೋಟಲೆ, ಕಾಯಿಲೆ, ಒಂಟಿತನಗಳು ಕೊನೆತನಕ ಕಾಡಿದವು. ಜೀವನ ಎಂದಿದ್ದರೂ ನಾಟಕಕ್ಕಿಂತ ತೀರ ಭಿನ್ನವಲ್ಲವೇ ?

– 'ನೆನಪಿನಲ್ಲಿ ನಿಂತವರು'ದಿಂದ ಆಯ್ದದ್ದು

ಅತ್ತಿಮಬ್ಬೆ ಪ್ರಶಸ್ತಿ ಸನ್ಮಾನಿತೆ ಸಾರಾ ಅಬೂಬಕ್ಕರ್

ಕನ್ನಡ ಸಾಹಿತ್ಯದಲ್ಲಿ ಮೊದಲಬಾರಿಗೆ ಮುಸ್ಲಿಂ ಹೆಣ್ಣಿನ ನೋವು ನಲಿವುಗಳಿಗೆ ದನಿಕೊಟ್ಟ ಕೀರ್ತಿಗೆ ಪಾತ್ರರಾಗಿರುವ ಖ್ಯಾತ ಲೇಖಕಿ ಸಾರಾ ಅಬೂಬಕ್ಕರ್‌ರವರಿಗೆ ಈ ಬಾರಿಯ ಕರ್ನಾಟಕ ಸರ್ಕಾರದ ಹಿರಿಯ ಪ್ರಶಸ್ತಿಗಳಲ್ಲೊಂದಾದ 'ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ' ಸಂದಿದೆ, ಕನ್ನಡ ಓದುಗವರ್ಗಕ್ಕೆ ಎಂಬತ್ತರ ದಶಕದಲ್ಲಿ ಅಲ್ಲಿಯವರೆಗೂ ಅಪರಿಚಿತವಾಗಿರಿದ್ದ ಮುಸ್ಲಿಂ ಹೆಣ್ಣಿನ ಬದುಕಿನ ವಿವಿಧ ಮುಖಗಳನ್ನು ಸ್ತ್ರೀಸಂವೇದನೆಯ ಮೂಲಕ ವಿಶ್ಲೇಷಿಸಿದ್ದು ಸಾರಾ ಅವರ ಅಮೂಲ್ಯ ಸಾಹಿತ್ಯಕ ಕೊಡುಗೆಯಾಗಿದೆ. ಜೀವನದ ನಡುವಯಸ್ಸಿನಲ್ಲಿ ಬರವಣಿಗೆಗೆ ತೊಡಗಿದರೂ ಬಹಳ ಬೇಗ ಸಾಹಿತ್ಯ ಕೃಷಿಯಲ್ಲಿ ಪರಿಣತಿ ಸಾಧಿಸಿ ಸಾಹಿತ್ಯ ಕ್ಷೇತ್ರದಲ್ಲಿ ತಮ ಗಟ್ಟಿ ನೆಲೆಯನ್ನು ಸ್ಥಾಪಿಸಿ ಕೊಂಡ ಸಾರಾ ಹಲವಾರು ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ.

ವಿವಾಹ ವಿಚ್ಛೇದನದ ಸಮಸ್ಯೆಯಲ್ಲಿ ಬೇಯುವ ಹೆಣ್ಣಿನ ನೋವಿನ ಕತೆಯ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯ ಮೂಲಕ ಕನ್ನಡ ಸಾರಸ್ವತಲೋಕಕ್ಕೆ ಪರಿಚಿತರಾದ ಸಾರಾ ನಂತರ ಹಿಂದೆ ನೋಡಲಿಲ್ಲ, ಬಹುಪತ್ನಿತ್ವದ ಸಮಸ್ಯೆಯನ್ನಾಧರಿಸಿದ ಅವರ 'ಸಹನಾ' ಇದೇ ಜಾಡಿನಲ್ಲಿ ಸಾಗಿದ ಮತ್ತೊಂದು ಕಾದಂಬರಿ ಅನಂತರ ಅವರಿಂದ ಕಥೆ, ಕಾದಂಬರಿಗಳ ಮಹಾಪೂರವೇ ಹರಿದು ಬಂತು. **ವಜ್ರಗಳು ಕದನವಿರಾಮ, ಸುಳಿಯಲ್ಲಿ ಸಿಕ್ಕವರು, ಪ್ರವಾಹ-ಸುಳಿ, ತಳವೊಡೆದ ದೋಣಿಯಲ್ಲಿ ಇವು ಅವರ ಪ್ರಮುಖ ಕಾದಂಬರಿಗಳು. ಚಪ್ಪಲಿಗಳು, ಪಯಣ ಮತ್ತು ಇತರ ಕಥೆಗಳು, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು ಮತ್ತು ಖೆಡ್ಡಾ** ಅವರ ಕಥಾ ಸಂಕಲನಗಳಾಗಿವೆ. ವರದಕ್ಷಿಣೆ, ತಲಾಖ್, ಬಹುಪತ್ನಿತ್ವದಂತಹ ಪ್ರಮುಖ ಸಮಸ್ಯೆಗಳನ್ನಾಧರಿಸಿದ ಇವರ ಕಥಾ ಸಾಹಿತ್ಯ ಮುಸ್ಲಿಂ ಸಮುದಾಯದ ಬಡ ಮತ್ತು ಕೆಳ ಮಧ್ಯಮ ವರ್ಗದ ಜನರ ಬದುಕಿನ ಸ್ವರೂಪವನ್ನು ನಮ್ಮ ಮುಂದೆ ಬಿಚ್ಚಿಡುತ್ತವೆ. ಧಾರ್ಮಿಕ ಅಂಧಃಶ್ರದ್ಧೆಯ ಕಾವು ಹೆಣ್ಣಿನ ಬದುಕನ್ನು ಹಿಂಡಿ ನಿರ್ದಯವಾಗಿ ವ್ಯವಹರಿಸುವ ಬಗೆಯನ್ನು ಸಾರಾ ದಿಟ್ಟತನದಿಂದ ತಮ್ಮ ಕೃತಿಗಳಲ್ಲಿ ಬಯಲುಮಾಡುತ್ತಾರೆ. ಇಷ್ಟೇ ಅಲ್ಲದೆ ಅವರ ವೈಚಾರಿಕ ಕೃತಿಗಳಾದ 'ಲೇಖನಗುಚ್ಛ' ಮತ್ತು 'ಅನಾವರಣ'ಗಳು ಅವರ ಯೋಚನಾಸರಣಿಯ ತಾರ್ಕಿಕತೆಯನ್ನು ಪರಿಚಯಿಸುತ್ತವೆ. ಅವರ ಮನೋಮಿ, ಬಲೆ, ಮತ್ತು ನಾನಿನ್ನು ನಿದ್ರಿಸುವೆ ಮುಂತಾದ ಅನುವಾದಿತ ಗ್ರಂಥಗಳು ಕಮಲಾದಾಸ್, ಬಿ.ಎಂ. ಸುಹರ್ ಮತ್ತು ಪಿ.ಕೆ. ಬಾಲಕೃಷ್ಣನ್‌ರವರ ಕೃತಿಗಳ ಅನುವಾದಗಳಾಗಿವೆ. ಇತ್ತೀಚೆಗೆ ಅವರು ಪ್ರಕಟಿಸಿದ 'ಇಷಾರಾಮದ ಆಳದಲ್ಲಿ' ಪ್ರವಾಸ ಕಥನವಾಗಿದೆ.

ಸಾರಾ ತಮ್ಮ ಕೃತಿಗಳ ಮೂಲಕ ಮಾತ್ರವಲ್ಲದೆ, ಬದುಕಿನಲ್ಲೂ ಹೋರಾಟದ ಕಿಚ್ಚನ್ನು ಉಳಿಸಿಕೊಂಡವರು. ಮುಸ್ಲಿಂ ಸಮುದಾಯದ ಹುಳುಕುಗಳನ್ನು ತಮ್ಮ ಚಂದ್ರಗಿರಿಯ ತೀರದಲ್ಲಿ ಮತ್ತು ಸಹನಾದಲ್ಲಿ ಪ್ರಕಟಿಸಿದಾಗ ಅವರ ಮತಬಾಂಧವರ ದುರಾಗ್ರಹಕ್ಕೆ ಬಲಿಯಾಗಬೇಕಾಯಿತು. ಪುತ್ತೂರಿನ ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಸಾರಾ ಅವರನ್ನು ಮಾತನಾಡಲು ನಿಡದೆ ಅವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದು ಕೊಂಡು, ಅವರ ಮೇಲೆ ಹಲ್ಲೆ ನಡೆಸಿದ ಘಟನೆ ಜರುಗಿತು. ಆದರೆ ಸಾರಾ ಅವರಿಗೆ ಅವರು ಕುಟುಂಬವು ನೀಡಿದ ಬೆಂಬಲ ಮತ್ತು ಪ್ರಗತಿಪರ ಶಕ್ತಿಗಳ ಒತ್ತಾಸೆಯಿಂದ ಮೂಲಭೂತವಾದಿಗಳ ಹಠಕ್ಕೆ ಮಣಿಯದೆ ನಿಲ್ಲಲು ಸಾಧ್ಯವಾಯಿತು. ಕೋರ್ಟಿನಲ್ಲಿ ಮೂಲಭೂತವಾದಿಗಳ ವಿರುದ್ಧ ಮಾನನಷ್ಟ ಮೊಕದ್ದಮೆಯನ್ನು ಹಾಕಿದ ಸಾರಾ ಆ ಹೋರಾಟದಲ್ಲಿ ವಿಜಯಿಯಾಗಿ ಹೊರಬಂದರು.

ತಡವಾಗಿ ಬರವಣಿಗೆಗೆ ತೊಡಗಿದರೂ ಸಾರಾ ಅವರಿಗೆ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಪ್ರಶಸ್ತಿ ದೊರಕಿತು. ಅವರ ಸಹನಾ ಕಾದಂಬರಿಗೆ ವರ್ಧಮಾನ ಉದಯೋನ್ಮುಖ ಸಾಹಿತ್ಯ ಪ್ರಶಸ್ತಿ, 'ಸುಳಿಯಲ್ಲಿ ಸಿಕ್ಕವರು ಕೃತಿಗೆ ಕರ್ನಾಟಕ ಲೇಖಕಿಯರ' ಸಂಘದ ಅನುಪಮಾನಿರಂಜನ ಪ್ರಶಸ್ತಿಗಳೊಂದಿಗೆ ಇನ್ನು ಹಲವಾರು ಪ್ರಶಸ್ತಿಗಳು ಸಂದಿವೆ. ೧೯೯೪ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಮತ್ತು ೧೯೯೬ ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯ ಗೌರವ ಅವರಿಗೆ ದೊರೆತಿದೆ. ಈಗ ಇತ್ತೀಚೆಗೆ ಕರ್ನಾಟಕ ಸರ್ಕಾರದಿಂದ ಅವರಿಗೆ ಲಭಿಸಿರುವ ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಅವರ ಅಭ್ಯುದಯದ ಮಕುಟಕ್ಕೆ ಮತ್ತೊಂದು ಗರಿ ಮುಡಿಸಿದೆ. ಈ ಸಂದರ್ಭದಲ್ಲಿ ಸಾರಾ ಅವರಿಗೆ 'ಅಚಲ'ದ ಅಭಿನಂದನೆಗಳು.

ಖಾಕಿ ಮಹಿಳೆಯರ ಕಥೆ - ವ್ಯಥೆ

ದೇಶಕ್ಕೆ ಸ್ವಾತಂತ್ರ್ಯ ಬಂದು ಐವತ್ತೈದು ವರ್ಷಗಳು ಕಳೆದ ನಂತರ ಈಗ ಮೊದಲಬಾರಿಗೆ ಮಹಿಳಾ ಪೋಲಿಸರು ತಮ್ಮ ಕಥೆ-ವ್ಯಥೆಯನ್ನು ತೋಡಿಕೊಳ್ಳುವ ಅವಕಾಶ ಕಲ್ಪಿಸಿಕೊಂಡಿದ್ದಾರೆ. ಸಂದರ್ಭ- ದೆಹಲಿಯಲ್ಲಿ ಫೆಬ್ರವರಿ ೧೯ರಂದು ಆರಂಭವಾದ ಮಹಿಳಾ ಪೋಲೀಸರ ರಾಷ್ಟ್ರೀಯ ಸಮಾವೇಶ. ಮೂರುದಿನಗಳ ಕಾಲ ನಡೆದ ಈ ಸಮಾವೇಶದಲ್ಲಿ ದೇಶದ ಹಲವಾರು ರಾಜ್ಯಗಳಿಂದ ಬಂದ ವಿವಿಧ ಹಂತದ ಇನ್ನೂರು ಪೋಲಿಸ್ ಮಹಿಳೆಯರಿದ್ದರು. ದೆಹಲಿಯ ಜಂಟಿ ಪೋಲಿಸ್ ಆಯುಕ್ತರಾದ ಕಿರಣ್ ಬೇಡಿಯವರು ಈ ಸಮಾವೇಶದ ಮಹತ್ವವನ್ನು ಕುರಿತು ಹೇಳುತ್ತಾ ಸದ್ಯದ ಪರಿಸ್ಥಿತಿಯಲ್ಲಿ ದೇಶದ ಪೋಲಿಸ್ ಮಹಿಳೆಯರ ಸಮಸ್ಯೆಗಳನ್ನು ಮುಂದಿಟ್ಟರು. ಹದಿಮೂರು ಲಕ್ಷ ಪೋಲಿಸರ ಸಂಖ್ಯೆಯಿರುವ ನಮ್ಮ ದೇಶದಲ್ಲಿ ಮಹಿಳೆಯರು ಇದರಲ್ಲಿ ಕೇವಲ ಶೇಕಡ ೩ರಷ್ಟು ಮಾತ್ರ ಇದ್ದಾರೆ. ಸಂಖ್ಯೆಯಿಂದ ಮಾತ್ರವಲ್ಲ, ಪೋಲಿಸ್ ಮಹಿಳೆಯರು ಅವಕಾಶಗಳಿಂದಲೂ ವಂಚಿತರಾಗಿದ್ದಾರೆ. ಜಮ್ಮು ಮತ್ತು ಕಾಶ್ಮೀರದಂತಹ ಗಲಭೆ ಪೀಡಿತ ಜಾಗಗಳಲ್ಲಿ ಸೇವೆ ಸಲ್ಲಿಸುವ ಇಚ್ಛೆಯನ್ನು ವ್ಯಕ್ತಪಡಿಸಿ ಮಹಿಳೆಯರು ಮುಂದೆ ಬಂದರೂ ಅವರಿಗೆ ಅಂತಹ ಅಪರೂಪದ ಅವಕಾಶಗಳನ್ನು ನಿರಾಕರಿಸಲಾಗುತ್ತದೆ ಇತ್ತೀಚೆಗೆ ನಡೆದ ಪೋಲಿಸರ ಸಂದರ್ಶನದಲ್ಲಿ ೫೦೬ ಮಹಿಳೆಯರಲ್ಲಿ ಶೇ ೫೭% ಕಾನ್‌ಸ್ಟೇಬಲ್ ಹುದ್ದೆಗೆ, ಐ.ಪಿ.ಎಸ್ ಮಹಿಳೆಯರು ಕೇವಲ ಶೇ ೫% ರಷ್ಟಿದ್ದರು. ಸಮಾಜದ ದೃಷ್ಟಿಯಲ್ಲೂ ಈ ಪೋಲಿಸ್ ಮಹಿಳೆಯರನ್ನು ಕುರಿತ ದೃಷ್ಟಿಕೋನ ಇನ್ನೂ ಬದಲಾಗಬೇಕಿದೆ ''ತಮ್ಮನ್ನು ಸಮರ್ಥಿಸಿಕೊಂಡು ಹೆಚ್ಚಿನ ಶೌರ್ಯ ಪ್ರದರ್ಶಿಸಿದರೆ ಆಕ್ರಮಣಕಾರಿಗಳೆಂಬ ಆರೋಪಕ್ಕೆ ಗುರಿಯಾಗುತ್ತಾರೆ, ಇಲ್ಲವೆ ದುರ್ಬಲರೆಂಬ ಅಪಹಾಸ್ಯಕ್ಕೆ ಈಡಾಗುತ್ತಾರೆ''

ಈ ರಾಷ್ಟ್ರೀಯ ಸಮಾವೇಶವನ್ನು ಬ್ಯೂರೋ ಆಫ್ ಪೋಲಿಸ್ ರಿಸರ್ಚ್, ಕೇಂದ್ರ ಗೃಹಖಾತೆಯ ಸಚಿವಾಲಯ, ಬ್ರಿಟಿಷ್‌ಕೌನ್ಸಿಲ್ ಜಂಟಿಯಾಗಿ ವ್ಯವಸ್ಥೆಗೊಳಿಸಿದ್ದವು. ಈ ಸಮಾವೇಶದ ಮುಖ್ಯ ಉದ್ದೇಶ: ಗಂಡು ಮತ್ತು ಹೆಣ್ಣಿನ ಸಂಬಂಧವನ್ನು ನಿರ್ವಹಿಸುವಲ್ಲಿ ಲಿಂಗ ಸೂಕ್ಷ್ಮತೆ, ಕುಟುಂಬ, ಸಮುದಾಯಗಳಲ್ಲಿ ಪುರುಷ ಸಹೋದ್ಯೋಗಿಗಳು ತಮ್ಮ ಜೊತೆಯ ಮಹಿಳಾ ಸಹೋದ್ಯೋಗಿಗಳೊಂದಿಗೆ ತೋರಿಸಬೇಕಾದ ವರ್ತನೆಯನ್ನು ಕುರಿತಂತೆ ಆಡಳಿತಾತ್ಮಕವಾದ ಕ್ರಿಯಾಯೋಜನೆಯನ್ನು ರೂಪಿಸುವುದೇ ಆಗಿದೆ.

ಕರ್ನಾಟಕದಲ್ಲಿರುವ ಪೋಲಿಸರ ಸಂಖ್ಯೆಯಲ್ಲಿ ಮಹಿಳೆಯರಿರುವುದು ಶೇಕಡ ೧ರಷ್ಟು ಮಾತ್ರ (೭೭೨ ಪೋಲಿಸ್ ಮಹಿಳೆಯರು) ಇವರಲ್ಲಿ ಮೂವರು ಐ.ಪಿ.ಎಸ್ ಅಧಿಕಾರಿಣೆಯರಿದ್ದಾರೆ. ಈ ಮೂರು ದಿನದ ಸಮ್ಮೇಳನದಲ್ಲಿ ಭಾಗವಹಿಸಲು ಕರ್ನಾಟಕದಿಂದ ಹನ್ನೊಂದು ಸದಸ್ಯೆಯರ ತಂಡವೊಂದು ನಿರ್ಮಲಾ ಹರೀಶ್‌ರ ನೇತೃತ್ವದಲ್ಲಿ ಭಾಗವಹಿಸಿತ್ತು. ಸಮಾವೇಶದಲ್ಲಿ ನಡೆದ ವಿವಿಧ ಚರ್ಚೆಗಳಲ್ಲಿ ಮೂಡಿಬಂದ ಸಂಗತಿಗಳೆಂದರೆ- ಪೋಲಿಸ್ ಮಹಿಳೆಯರು ಅವರ ಪುರುಷ ಸಹೋದ್ಯೋಗಿಗಳಷ್ಟೇ ವಿದ್ಯಾರ್ಹತೆಗಳನ್ನು ಪಡೆದಿದ್ದರೂ ಅವರಿಗೆ ವಿಧಿಸುವ ಕೆಲಸಗಳೆಲ್ಲ ಅತ್ಯಂತ ಸಾಧಾರಣ ಮಟ್ಟದವು, ನಾಜೂಕಿನವು ಆಗಿರುತ್ತವೆ. ಪೋಲಿಸ್ ಮಹಿಳೆಯರಿಗೆ ಸಾಮಾನ್ಯವಾಗಿ ಸಂಚಾರ-ಸಾರಿಗೆ ಡಕಾಯಿತಿ, ಭಯೋತ್ಪಾದಕರ ವಿರುದ್ಧದ ಕಾರ್ಯಾಚರಣೆಯನ್ನು ಕೊಡುವುದಿಲ್ಲ, ಅಷ್ಟೇ ಅಲ್ಲ, ಆಧುನಿಕ ಶಸ್ತ್ರಾಸ್ತ್ರ ಬೆರಳಚ್ಚು ತಜ್ಞತೆ ಮತ್ತು ಛಾಯಾಚಿತ್ರದ ಪರಿಣತಿಯ ತರಬೇತಿಗಳನ್ನು ಕೊಡುವುದಿಲ್ಲ. ಅಷ್ಟೇ ಅಲ್ಲ ಕರ್ನಾಟಕದ ಮಹಿಳೆಯರ ಮುಖ್ಯದೂರೆಂದರೆ, ಅವರಿಗೆ ಪ್ರತ್ಯೇಕ ವಿಶ್ರಾಂತಿ ಕೊಠಡಿ ಮತ್ತು ಶೌಚಾಲಯಗಳ ವ್ಯವಸ್ಥೆ ಇಲ್ಲವೆಂಬುದೇ ಆಗಿದೆ. ಗಂಡಸರ ಶೌಚಾಲಯವನ್ನೇ ಮಹಿಳೆಯರು ಬಳಸಬೇಕಾದ್ದರಿಂದ ಕೆಲವೊಮ್ಮೆ ಪುರುಷ ಪೋಲಿಸ್ ಕಾನ್‌ಸ್ಟೇಬಲ್‌ಗಳನ್ನು ಶೌಚಾಲಯದ ಹೊರಗೆ ಕಾವಲು ನಿಲ್ಲಲು ವಿನಂತಿಸಿಕೊಳ್ಳಬೇಕಾಗುತ್ತದೆಂಬ ಮುಜುಗರವನ್ನು ತೋಡಿಕೊಂಡರು.


ಕರ್ನಾಟಕದಲ್ಲಿ ಆರು ಮಹಿಳಾ ಪೋಲಿಸ್ ಠಾಣೆಗಳಿದ್ದರೂ ಪೋಲಿಸ್ ಮಹಿಳೆಯರ ಸಾಮರ್ಥ್ಯ ಮತ್ತು ಕಾರ್ಯನಿಷ್ಠೆಯ ಬಗ್ಗೆ ಆಡಳಿತ ವರ್ಗಕ್ಕೆ ವಿಶ್ವಾಸವಿರುವುದು ಕಡಿಮೆಯೇ. ರಾತ್ರಿ ಪಾಳಿಯ ಕೆಲಸ, ಅಪರಾಧ ಪ್ರಕರಣಗಳ ತನಿಖೆಯಂತಹ ಜವಾಬ್ದಾರಿಯುತ ಕೆಲಸಗಳನ್ನು ಮಹಿಳೆಯರಿಗೆ ನೀಡದಿರುವುದು ಅವರ ಕಾರ್ಯವೈಶಾಲ್ಯತೆಯನ್ನು ಹೆಚ್ಚಿಸಿಕೊಳ್ಳುವಲ್ಲಿ ಅಡ್ಡಿಯುಂಟುಮಾಡಿದೆ. ಇಪ್ಪತ್ತು ನಾಲ್ಕು ವರ್ಷಗಳು ಸೇವೆ ಮಾಡಿರುವ ಕರ್ನಾಟಕದ ನಿರ್ಮಲಾ ಹರೀಶ್ 'ನಾನು ಮೊದಲು ಪೋಲಿಸ್, ನಂತರ ನಾನೊಬ್ಬಳು ಮಹಿಳೆ' ಎನ್ನುವ ಮಾತುಗಳು ಮಹಿಳೆಯರ ವೃತ್ತಿಪರತೆಯ ಅಗತ್ಯವನ್ನು ಸಾರುತ್ತದೆ.

ಈ ಸಮಾವೇಶ ಖಾಕಿ ಮಹಿಳೆಯರು ತಮ್ಮ ಅಂತರಂಗ ಬಿಚ್ಚಿಕೊಳ್ಳಲು ಅವಕಾಶ ಒದಗಿಸಿದಂತೆ, ಸರ್ಕಾರ ಮತ್ತು ಸಮಾಜವು ಈ ವರ್ಗದ ಮಹಿಳೆಯರ ಸಾಧನೆ ಮತ್ತು ಸಮಸ್ಯೆಗಳ ಬಗ್ಗೆ ಕಣ್ತೆರೆಯುವಂತೆ ಮಾಡಿದೆ.

ಗೌರಿ

ನೆನಪಿನಲ್ಲಿ ಉಳಿಯಬೇಕಾದವರು

ನೆನಪಿನಲ್ಲಿ ನಿಂತವರು.
ಲೇ: ಡಾ। ಜ್ಯೋತ್ಸ್ನಾ ಕಾಮತ್,
ಪ್ರಕಾಶಕರು-ಮಹಿಳಾ ಸಾಹಿತ್ಯಿಕ, ನವನಗರ, ಹುಬ್ಬಳ್ಳಿ.
೨೦೦೦, ಬೆಲೆ-ರು, ೭೫, ಪುಟಗಳು -೧೬೮.



ಸಂಶೋಧನೆ, ಹಾಸ್ಯ ಪ್ರಬಂಧಗಳ ಬರಹಗಾರ್ತಿಯಾಗಿ ಈಗಾಗಲೇ ಪರಿಚಿತರಾಗಿರುವ ಡಾ। ಜ್ಯೋತ್ಸ್ನಾ ಕಾಮತ್‌ರವರ 'ನೆನಪಿನಲ್ಲಿ ನಿಂತವರು' ನೆನಪಿನಲ್ಲಿ ಉಳಿಯಬೇಕಾದ ಅಪರೂಪದ ಸಾಧಕಿಯರ ಪರಿಚಯ ಮಾಡಿಕೊಡುವ ಹದಿನಾಲ್ಕು ವ್ಯಕ್ತಿ ಚಿತ್ರಗಳು ಸಮಾಜದ ಮತ್ತು ಸಾಂಸ್ಕೃತಿಕ ರಂಗದ ವಿವಿಧ ಕ್ಷೇತ್ರಗಳ ಪರಿಣತರನ್ನು ಮತ್ತ ಅವರ ಸಾಮಾಜಿಕ ಕಳಕಳಿಯನ್ನು ಹಾಗೂ ಕಲಾಶ್ರದ್ಧೆಯನ್ನು ಪರಿಚಯಮಾಡಿಕೊಡುತ್ತದೆ. ಲೇಖಕಿಯು ಇವರೆಲ್ಲರನ್ನೂ ವೈಯಕ್ತಿಕವಾಗಿ ಭೇಟಿಯಾದವರು ಮತ್ತು ಅವರ ಜೀವನಶೈಲಿಗೆ ಮೂರು ಹೋದವರು.

ಜ್ಞಾನ ಪೀಠ ಪ್ರಶಸ್ತಿ ವಿಜೇತೆ ಆಶಾ ಪೂರ್ಣದೇವಿಯವರ ಬದುಕಿನ ಒಳನೋಟ, ಕೌಟುಂಬಿಕ ವಿವರಗಳು ಕುತೂಹಲ ಹುಟ್ಟಿಸುವುದಷ್ಟೇ ಅಲ್ಲದೆ ಬಂಗಾಲದ ಶ್ರೀಮಂತ, ಆದರೆ ಸಾಂಪ್ರದಾಯಿಕ ಜೀವನದ ಪರಿಚಯ ಮಾಡಿಕೊಡುತ್ತದೆ. ಹಾಗೆಯೇ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತೆ ಬಂಗಾಲಿ ಲೇಖಕಿ ಮೈತ್ರೇಯಿ ದೇವಿಯವರ ವೈವಿಧ್ಯಮಯ ಬದುಕು, ಸಾಹಿತ್ಯದ ಪರಿಚಯ ಮಾಡಿಕೊಡುತ್ತಾರೆ. ರವೀಂದ್ರನಾಥ ಠಾಗೋರರು ಮೈತ್ರೇಯಿಯವರಿಗೆ ಬರೆದ ಇನ್ನೂರು ಪತ್ರಗಳ ಆಧಾರಿತ ಕಾದಂಬರಿ 'ನ ಹನ್ಯತೆ'ಯ ಹಿನ್ನೆಲೆಯನ್ನು ಪರಿಚಯಿಸಿರುವ ರೀತಿ ಸ್ವಾರಸ್ಯಕರವಾಗಿದೆ. ಬಂಗಾಲದ ಲೇಖಕಿಯರನ್ನು ಪರಿಚಯಮಾಡಿಕೊಟ್ಟಷ್ಟೇ ತನ್ಮಯತೆಯಿಂದ ಕನ್ನಡದ ಎಂ.ಕೆ. ಇಂದಿರಾ ವಾಗೀಶ್ವರೀ ಶಾಸ್ತ್ರಿಯವರ ಪರಿಚಯವನ್ನು ನಮಗೆ ಮಾಡಿಸುತ್ತಾರೆ.

ಲೇಖಕಿಯ ಸಾಹಿತ್ಯಾಸಕ್ತಿಯಂತೆ ಕಲಾಭಿರುಚಿಯೂ ಈ ಕೃತಿಯಲ್ಲಿ ವ್ಯಕ್ತವಾಗುತ್ತದೆ. ಅಪೂರ್ವ ಅಭಿನೇತ್ರಿ ಬಂಗಾಲದ ತೃಪ್ತಿ ಮಿತ್ರ, ಕಲಾವಿದೆ ಕಮಲಾದೇವಿ ಚಟ್ಟೋಪಾಧ್ಯಾಯ, ಚಿತ್ರ ಕಲಾವಿದೆ ಮುಕ್ತಾ ವೆಂಕಟೇಶ್, ಶಿಲ್ಪ ಕಲಾವಿದೆ ಸುಭಾಷಿಣಿದೇವಿಯವರ ಸಾಧನೆ, ಸಾಹಸಗಳ ಪರಿಚಯ ಮಾಡಿಕೊಂಡುತ್ತಾರೆ.

ಸಮಾಜಕಲ್ಯಾಣ ಮತ್ತು ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ಅಮರಾದ ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ಉಮಾಬಾಯಿ ಕುಂದಾಪುರರವರ ನಿಸ್ವಾರ್ಥ ಜೀವನ ಚಿತ್ರಗಳು ಸ್ತ್ರೀ ಚೇತನದ ಪಾರಮ್ಯತೆಯನ್ನು ಎತ್ತಿ ಹಿಡಿಯುವಂತಹುದು ಓದುಗರಿಗೆ ಮಾಹಿತಿಗಳನ್ನು ಕೊಡುವುದಷ್ಟೇ ಅಲ್ಲದೆ, ಜೀವನೋತ್ಸಾಹವನ್ನು ತುಂಬಬಲ್ಲ ಗುಣಹೊಂದಿದೆ.

ಶಿಕ್ಷಣ ತಜ್ಞೆ ಚಿ.ನ. ಮಂಗಳಾರವರ ವ್ಯಕ್ತಿ ಚಿತ್ರ, ಮತ್ತು ಲೇಖಕಿಯ ಒಡನಾಟದ ನೆನಪುಗಳು ಆ ಧುರೀಣೆಯರ ಬದುಕಿನ ಕೆಲವು ಎಳೆಗಳನ್ನು ಪರಿಚಯಿಸುತ್ತವೆ. ವೈದ್ಯೆಯರಾಗಿ ಸಾಕಷ್ಟು ಹಣ ಸಂಪಾದಿಸಿ ಶ್ರೀಮಂತ ಜೀವನವನ್ನು ನಡೆಸಬಹುದಾದ ಸಾಧ್ಯತೆಯಿದ್ದರೂ ಅವೆಲ್ಲವನ್ನೂ ತಿರಸ್ಕರಿಸಿ ಸಾರ್ಥಕ ಬದುಕುಸಾಗಿಸಿದ ಡಾ। ಆನಂದಿಬಾಯಿ ಪ್ರಸಾದ್ ಮತ್ತು ಡಾ। ಆನಂದಿಬಾಯಿ ಪ್ರಸಾದ್ ಮತ್ತು ಡಾ। ಕುಸುಮಾ ಸೊರಬ ಅವರ ಚಿತ್ರಣ ಯಶಸ್ವಿ ಮಹಿಳೆಯರ ಸಂಕೇತವಾಗಿದೆ.

ಒಟ್ಟಿನಲ್ಲಿ ನೆನಪಿನಲ್ಲಿ ಉಳಿಯಬೇಕಾದ ಧೀಮಂತ ಮಹಿಳೆಯರನ್ನು ಚಿತ್ರಿಸಿ ಸಂಕಲನದ ರೂಪದಲ್ಲಿ ಹೊರ ತಂದಿರುವ ಡಾ। ಜ್ಯೋತ್ಸ್ನಾಕಾಮತ್‌ರು ಮಹಿಳಾ ಅಧ್ಯಯನಕ್ಕೆ ವಿಶೇಷ ಪರಿಕರವನ್ನು ಒದಗಿಸಿದ್ದಾರೆ. ಪ್ರಶಸ್ತಿ, ಸಮಾರಂಭ, ಅದ್ದೂರಿ ಆಡಂಬರಗಲ ಹೊರೆಯಲ್ಲಿ ಮಹಿಳೆಯರ ಸಾಧನೆಗಳನ್ನು ಗುರುತಿಸುವ ಸಂಪ್ರದಾಯವಿರುವ ಇಂದಿನ ಜೀವನಕ್ರಮದಲ್ಲಿ ನಿಜವಾದ ಜೀವನದ ಅಂತಸ್ಸತ್ವವನ್ನು ಗುರುತಿಸುವ ಪ್ರಯತ್ನಮಾಡಿದ್ದಾರೆ. ಆ ದೃಷ್ಟಿಯಿಂದ ಇದು ಸಂಗ್ರಹಯೋಗ್ಯ ಕೃತಿಯಾಗಿದೆ.

-ಆಶಾ

ಪೆಣ್ಬುಯ್ಯಲ್ - ಹೆಣ್ಣಿನ ಶೋಷಣೆಯ ಒಂದು ಮುಖ

ಅನೇಕ ಕಾರಣಗಳಿಗೆ ಯುದ್ಧಗಳು ನಡೆದಿವೆ ಮತ್ತು ನಡೆಯುತ್ತವೆ. ಈ ಕಾಲದ ಯುದ್ಧ ಸ್ವರೂಪವು ಹಿಂದಿನ ಕಾಲದಲ್ಲಿರಲಿಲ್ಲ. ಈಗಿನಂತೆಯೇ, ಹಿಂದೆಯೂ ಯುದ್ಧವನ್ನು ಆರಂಭಿಸಲು ಯಾವುದಾದರೂ ಒಂದು ಪಕ್ಷವು ಕಾಲು ಕೆರೆಯಬೇಕಾಗಿತ್ತು; ಅಂದರೆ ಯುದ್ಧವನ್ನು ಆರಂಭಿಸಲು ಒಂದು ನೆಪವನ್ನು ಹುಡುಕಬೇಕಿತ್ತು. ಅದಕ್ಕಾಗಿ ಒಂದು ಕೆಣಕಾಟ. ಈ ಕೆಣಕಾಟದಲ್ಲಿ ಗೋಗ್ರಹಣ ಒಂದು ಕ್ರಮವಾದರೆ, ಮತ್ತೊಂದು ಕ್ರಮವೇ ಪೆಣ್ಬುಯ್ಯಲ್. ಕೆಲವು ಬಾರಿ ಇದೇ ಒಂದು ಯುದ್ಧದ ಸ್ವರೂಪದಲ್ಲೂ ಇರುತ್ತಿತ್ತು. ಹಿಂದಿನ ಕಾಲದ ಕೆಲವು ಯುದ್ಧಗಳನ್ನು ದೊಡ್ಡ ಜಗಳಗಳು ಎಂದೇ ತಿಳಿಯಬಹುದು.

ಯುದ್ಧವಾದ ಮೇಲೆ ಗೆದ್ದವರು ಶತ್ರುಪಕ್ಷದವರನ್ನು ಹಿಂಸಿಸುತ್ತಿದ್ದ ಪ್ರಸಂಗಗಳು ಅಪರೂಪವೇನಲ್ಲ. ಕೆಲವರು ಅದನ್ನು ಕ್ರೀಡೆ ಎಂದೇ ಪರಿಗಣಿಸಿದ್ದಂತೆ ತೋರುತ್ತದೆ. ಗೆದ್ದವರು ಸೋತವರ ಊರುಗಳನ್ನು ನಾಶಪಡಿಸುವುದು ಮತ್ತು ಆ ತಂಡದ ಹೆಣ್ಣುಗಳನ್ನು ಅವಮಾನಗೊಳಿಸಿಸುವುದು ಗೆಲುವಿನ ಸಂಕೇತ ಎಂದು ಭಾವಿಸಿರಬಹುದು. ಕೆಲವೊಮ್ಮೆ ಒಂಟಿ ಹೆಣ್ಣು ಮಕ್ಕಳನ್ನು ಕೆಣಕಿ, ಅವಮಾನ ಮಾಡುವ ಹೀನ ಕೆಲಸವೂ ಆಗುತ್ತಿತ್ತು. ಅಂತೂ ಯುದ್ಧಕ್ಕೆ ಮೊದಲಾಗಲೀ, ನಂತರವಾಗಲೀ ಯುದ್ಧಕ್ಕೆ ಪ್ರೇರಣೆ ಆಗಿ ಅಥವಾ ಯುದ್ಧಾನಂತರ ಸಂಭ್ರಮದ ಆಚರಣೆಗಾಗಿ ಮಹಿಳೆಯರನ್ನು ಶೋಷಿಸುತ್ತಿದ್ದ ಪ್ರಸಂಗಗಳು ಶಾಸನಗಳು ಮತ್ತು ಕಾವ್ಯಗಳ ಮೂಲಕ ತಿಳಿಯುತ್ತವೆ. ಹೆಣ್ಣುಗಳನ್ನು ಕೆಣಕಿದಾಗ, ಅವರು ತಮ್ಮ ಶೀಲಭಂಗವಾಗಬಹುದೆಂಬ ಹೆದರಿಕೆಯಿಂದ ಜೋರಾಗಿ ಹುಯ್ಯಲಿಡುತ್ತಿದ್ದರು. ಇದು ಕೇವಲ ಊಹೆ ಎನಿಸಬಹುದಾದರೂ, ಅವಾಸ್ತವ ಅಥವಾ ಅತಾರ್ಕಿಕವಲ್ಲ. ತಮ್ಮ ಶೀಲಭಂಗವಾಗುತ್ತದೆಂಬ ಸುಳಿವು ಕಂಡ ಕೂಡಲೇ ಹೆಂಗಸರು ಕೂಗುತ್ತಾರೆ, ಅಂದರೆ ಹುಯ್ಯಲಿಡುತ್ತಾರೆ. ಹೆಣ್ಣುಗಳ ಆ ಹುಯ್ಯಲೇ 'ಪೆಣ್ಬುಯ್ಯಲ್'. ಶೀಲಭಂಗ ಎಂದಾಗ ಉಡಿಯನ್ನು, ಅಂದರೆ ಉಡಿಯ ಭಾಗದ ಸೀರೆಯನ್ನು ಕೀಳಲಾಗುತ್ತದೆ. ಅದು ಉಡಿಯನ್ನು ಉರ್ಚುವ ಕೆಲಸ. ಇತ್ತೀಚಿನ ದಿನಗಳಲ್ಲಿ ನಾವು ಕೇಳುತ್ತಿರುವ, ಸ್ತ್ರೀಯರನ್ನು ಬೆತ್ತಲೆ ಮಾಡಿ, ಸಂತೋಷಪಡುವ ಪ್ರಸಂಗಗಳನ್ನೇ ಹಿಂದೆ 'ಪೆಣ್ಬುಯ್ಯಲ್' ಎಂದೂ, ಕೆಲವೆಡೆ 'ಪೆಣ್ಣಿರುಡೆಯುರ್ಚಿ' ಎಂದೂ ಸಂಬೋಧಿಸಲಾಗಿದೆ ಎಂದು ಊಹಿಸಲು ಅವಕಾಶಗಳಿವೆ.

ಹೆಣ್ಣಿನ ಹುಯ್ಯಲು ಕೇಳುತ್ತಿದ್ದ ಹಾಗೆಯೇ ಊರಿನ ವೀರರು ಅಥವಾ ಒಬ್ಬ ವೀರ, ಹುಯ್ಯಲಿಗೆ ಓಗೊಟ್ಟು, ಅವರನ್ನು ರಕ್ಷಿಸಲು ಮುಂದಾಗುತ್ತಿದ್ದ. ಅತಹ ಸಂದರ್ಭದಲ್ಲಿ ಅವನ ಗೆಲುವು ಅಥವಾ ವೀರಮರಣವನ್ನು ಶಾಸನಗಳು ಮತ್ತು ವೀರಗಲ್ಲುಗಳು ದಾಖಲಿಸಿರುವ ಅನೇಕ ಉದಾಹರಣೆಗಳಿವೆ.

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಮದಲೂರು ಗ್ರಾಮದಲ್ಲಿರುವ ಕಲ್ಲೇಶ್ವರ ದೇವಾಲಯದ ಮುಂದೆ ಒಂದು ವೀರಗಲ್ಲಿದೆ. ಅದರಲ್ಲಿ ಎಡವಯ್ಯ ಮತ್ತು ಅವನ ಮೊಮ್ಮಗ ಜಕ್ಕ ಎಂಬುವವರು 'ಪೆಣ್ಣಿರುಡೆಯುವಲ್ಲಿ ಕಾದು' ಸತ್ತ ವಿಷಯ ದಾಖಲಾಗಿದೆ. ಇದರ ಕಾಲ ಕ್ರಿ.ಶ.ಸು.೧೦೦೦. ಸದ್ಯಕ್ಕೆ 'ಪೆಣ್ಬುಯ್ಯಲ್' ಅನ್ನು ಉಲ್ಲೇಖಿಸುವ ಮೊದಲ ಶಾಸನ ಇದಾಗಿದೆ ಎನ್ನಬಹುದು. ಮೈಸೂರು ಜಿಲ್ಲೆ ಮತ್ತು ಅದೇ ತಾಲ್ಲೂಕಿನ ಮಲ್ಲೇಗೌಡನ ಕೊಪ್ಪಲಿನಲ್ಲಿರುವ ಎರಡು ಶಾಸನಗಳು ಒಂದೇ ದಿನಕ್ಕೆ ಸೇರಿದ್ದು (೧೬-೬-೧೦೩೬), ಇದರಲ್ಲಿ ಚಂಗಾಳ್ವರ ಕಡೆಯವರು ತುಱುಗಳನ್ನು ಅಪಹರಿಸಿಕೊಂಡು ಹೋಗುತ್ತಿದ್ದಾಗ, ಬಾಗುಳಿಯ ಸಿರಿಯಣ್ಣ ಮತ್ತು ಪಳ್ಳಿಯ ಮುದ್ದಯ್ಯ ಎಂಬುವವರು 'ತುಱುವಮುಗುಟ್ಚಿ ಪೆಣ್ಡಿರುಮಂ ಮತ್ತು ಪೆಱಗಿಕ್ಕಿ' ಸಾಯುತ್ತಾರೆ. ಅದಕ್ಕೆ ವೀರಗಲ್ಲನ್ನು ಹಾಕಿಸಲಾಗಿದೆ. ಇಂತಹ ಅನೇಕ ದಾಖಲೆಗಳು ಕರ್ನಾಟಕದಲ್ಲಿ ಹೇರಳ ಎನ್ನುವ ಪ್ರಮಾಣದಲ್ಲಿಯೇ ಇವೆ. 'ಪೆಣ್ಬುಯ್ಯಲ್'ಗೆ ಸಂಬಂಧಿಸಿದ ವೀರಗಲ್ಲುಗಳಲ್ಲಿನ ಶಿಲ್ಪವು ಪುರುಷ ಪ್ರಧಾನವಾಗಿಯೇ ಇರುತ್ತದೆ. ಹೋರಾಡಿ ಮಡಿದ ವೀರನಿಗೆ ಹಾಕಿಸಿದ ಸ್ಮಾರಕ ಇದಾಗಿರುವುದರಿಂದ, ಸಹಜವಾಗಿಯೇ ವೀರನಿಗೆ ಪ್ರಾಧಾನ್ಯತೆ ದೊರೆತಿದೆ ಎಂದು ಭಾವಿಸಲು ಅವಕಾಶವಿದೆ. ಆದರೆ, ವೀರನ ಶಿಲ್ಪದಲ್ಲಿ ಹೋರಾಟದಲ್ಲಿ ನಿರತನಾಗಿರುವ ವೀರನ ಹಿಂಭಾಗದಲ್ಲಿ ಒಂದು ಅಥವಾ ಇನ್ನೂ ಹೆಚ್ಚು ಸ್ತ್ರೀಯರನ್ನು ಅರೆಬೆತ್ತಲೆಯಾಗಿ, ತಮ್ಮ ಮಾನವನ್ನು ರಕ್ಷಿಸಿಕೊಳ್ಳುವ ಭಂಗಿಯಲ್ಲಿ ಕೆತ್ತಲಾಗಿರುತ್ತದೆ.

ಯುದ್ಧಕ್ಕೆ ಮೊದಲು ವೀರರನ್ನು ಕೆಣಕಿ ಯುದ್ಧಕ್ಕೆ ಆಹ್ವಾನಿಸಲು ಅಥವಾ ಯುದ್ಧಾನಂತರ ಯುದ್ಧದ ಗೆಲುವನ್ನು ಸಂಭ್ರಮದಿಂದ ಆಚರಿಸಲು, ಸ್ತ್ರೀಯರನ್ನು ಶತ್ರು ಪಕ್ಷದವರು ಹೀಗೆ ದುರುಪಯೋಗ ಮಾಡಿಕೊಳ್ಳುತ್ತಿದ್ದರು. ಮಾನಭಂಗದಿಂದ ರಕ್ಷಣೆ ಪಡೆಯಲು, ಹೆದರಿ ಹುಯ್ಯಲಿಟ್ಟವರು ಹೆಂಗಸರು; ಅವರನ್ನು ರಕ್ಷಿಸಿದವರು ವೀರರು. ಇಂತಹ ವೀರರಿಗಾಗಿ ವೀರಗಲ್ಲುಗಳು ಹಾಕಲ್ಪಟ್ಟಿವೆ.

ಮಹಿಳೆಯರನ್ನು ಯುದ್ಧಕ್ಕೆ ಮೊದಲು ಮತ್ತು ಯುದ್ಧಾನಂತರ ಶೋಷಿಸುತ್ತಿದ್ದ ಇಂತಹ ಉದಾಹರಣೆಗಳು ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಇವೆ. ಇಂತಹ ಪ್ರಸಂಗಗಳನ್ನು ಕೆಲವು ಕವಿಗಳು ತಮ್ಮ ಕಾವ್ಯಗಳಲ್ಲೂ ಪ್ರಸ್ತಾಪಿಸಿದ್ದಾರೆ.

ಡಾ। ಎಚ್. ಎಸ್. ಗೋಪಾಲರಾವ್

ಕೃಪೆ : ಹೊಸತು.

ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಯೋಜನೆ:

ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದು ಸಾಮಾಜಿಕವಾಗಿ ಶೋಷಿತರಾದವರ ಅಭಿವೃದ್ಧಿಗಾಗಿ ವಿಶೇಷ ಒತ್ತುಕೊಟ್ಟು ಅವರಿಗೆ ಸಾಮಜಿಕ ನ್ಯಾಯ ಒದಗಿಸಿದಲ್ಲಿ ಮಾತ್ರ ಸಮಾನತೆ ಸಾಧಿಸುವುದು ಸಾಧ್ಯ ಇದು ''ಸರ್ವೇಜನಾಃ ಸುಖಿನೋಭವಂತು'' ಎಂಬ ಧ್ಯೇಯ ಈಡೇರಿಕೆಗೆ ಕಾರಣವಾಗುವುದು. ದೂರದೃಷ್ಟಿ ನಾಯಕಿ ಶ್ರೀ. ಎಸ್.ಎಂ.ಕೃಷ್ಣ ಅವರ ನೇತೃತ್ವದ ಪುಸ್ತಕ ಸರ್ಕಾರದ ಮಹೋದೇಶವೇ ಇದು. ಈ ದಿಸೆಯಲ್ಲಿ ಸರ್ಕಾರ ಹಿಂದುಳಿದವರ, ಅಳ್ಪಸಂಖ್ಯಾತರ, ದೀನದಲಿತರ ಹಾಗೂ ಶೋಷಿತರ ಕಲ್ಯಾಣಕ್ಕಾಗಿ ನೂತನ ಕಾರ್ಯಕ್ರಮಗಳನ್ನು ರೂಪಿಸಿ. ಅನುಷ್ಠಾನಗೊಳಿಸುವ ಮೂಲಕ ಅವರಲ್ಲಿ ಹೊಸ ಆಶಾಕಿರಣವನ್ನೇ ಮೂಡಿಸಿದೆ.

ಸಮಾಜ ಕಲ್ಯಾಣ ಇಲಾಖೆ ಹಿಂದುಳಿದ ವರ್ಗಗಳ ಅಭಿವೃದ್ಧಿ

★ ಇಲಾಖೆಯ ವಿವಿಧ ಕಾರ್ಯಕ್ರಮಗಳ ಅನುಷ್ಠಾನದ ಮೂಲಕ 6,10,733 ಫಲಾನುಭವಿಗಳಿಗೆ ರೂ.86 ಕೋಟಿ ನೆರವು. ★ ಪುಸ್ತಕ ಸಾಲಿನಲ್ಲಿ ಇಲಾಖೆಯ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರೂ.108,07 ಕೋಟಿ ಅನುದಾನ. ★ 20 ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಗಳು ಹಾಗೂ ಒಂದು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಮಂಜೂರು. ಒಟ್ಟು ಸಾಮರ್ಥ್ಯ 1,050 ವಿದ್ಯಾರ್ಥಿಗಳು. ★ ಒಟ್ಟು ರೂ. 585.49 ಲಕ್ಷಗಳ ವೆಚ್ಚದಲ್ಲಿ 40 ಮೆಟ್ರಿಕ್-ಪೂರ್ವ-ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಪೂರ್ಣ. 2,55,769 ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ರೂ.271,42 ಲಕ್ಷ. 91,621 ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ರೂ. 257,07 ಲಕ್ಷ ವಿದ್ಯಾರ್ಥಿವೇತನ ವಿತರಣೆ. ★ ರೂ 532,37 ಲಕ್ಷಗಳ ಮೌಲ್ಯದ 1,67,340 ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಸೌಲಭ್ಯ ★ ಮಾಂಗಲ್ಯ ಭಾಗ್ಯ ಯೋಜನೆಯಡಿಯಲ್ಲಿ ರೂ. 22.10 ಲಕ್ಷಗಳ ವೆಚ್ಚದಲ್ಲಿ 442 ಫಲಾನುಭವಿಗಳಿಗೆ ಆರ್ಥಿಕ ಸಹಾಯ. ★ 15,296 ಫಲಾನುಭವಿಗಳಿಗೆ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ರೂ. 2,119. 17 ಲಕ್ಷ ಆರ್ಥಿಕ ನೆರವು.

ಅಲ್ಪಸಂಖ್ಯಾತರ ಅಭಿವೃದ್ಧಿ :-

★ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿಯೇ ಪ್ರತ್ಯೇಕ ಇಲಾಖೆ 1999-2000ನೇ ಸಾಲಿನಿಂದ ಕಾರ್ಯಾರಂಭ. ಪುಸ್ತಕ ಸಾಲಿನಲ್ಲಿ ಈ ಇಲಾಖೆಯ ಕಾರ್ಯಕ್ರಮಗಳ ಜಾರಿಗಾಗಿ ರೂ. 263.40 ಲಕ್ಷ ಅನುದಾನ ಬಿಡುಗಡೆ. ★ ಶಿವಮೊಗ್ಗ, ಬಳ್ಳಾರಿ, ಹುಬ್ಬಳ್ಳಿ ಮತ್ತು ಬೆಳಗಾಂ ನಗರಗಳಲ್ಲಿ ಮೊರಾರ್ಜಿ ದೇಸಾಯಿ ವಸತಿಶಾಲೆಗಲ ಪ್ರಾರಂಭ. ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ಊಟ ಮತ್ತು ವಸತಿ ಸೌಲಭ್ಯಗಳಿಗಾಗಿ ರೂ.60.00ಲಕ್ಷಗಳ ವೆಚ್ಚ ★ ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರಿಗಾಗಿ ಬೆಂಗಳೂರು. ಮೈಸೂರು, ಧಾರವಾಡ, ಮಂಗಳೂರು ಮತ್ತು ಗುಲ್ಬರ್ಗಾ ನಗರಗಳಲ್ಲಿ 5 ವಿದ್ಯಾರ್ಥಿನಿಲಯಗಳ ಸ್ಥಾಪನೆ. ★ ಸಾಂಸ್ಕೃತಿಕ ಹಾಗೂ ಸಾಮಾಜಿಕ ಚಟುವಟಿಕೆಗಳಿಗಾಗಿ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಅಲ್ಪಸಂಖ್ಯಾತರ ವರ್ಗಗಳಿಗೆ ಸೇರಿದ ಐ.ಟಿ.ಐ/ಡಿಪ್ಲೋಮಾ ತರಗತಿಗಳ 840ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ರೂ,9.25 ಲಕ್ಷ ಶಿಷ್ಯವೇತನ. ★ 52 ಕಾನೂನು ಪದವೀಧರರಿಗೆ ನ್ಯಾಯಾಂಗ ಆಡಳಿತದಲ್ಲಿ ತರಬೇತಿ. ★ ರೂ. 1,536,42 ಲಕ್ಷಗಳ ವೆಚ್ಚದಲ್ಲಿ 12,047 ಫಲಾನುಭವಿಗಳಿಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ನೆರವು. ಸಾಧಿಸಿದ್ದು ಬಹಳಷ್ಟು, ಸಾಧಿಸಬೇಕಾಗಿರುವುದು ಇನ್ನೂ ಬಹಳಷ್ಟು

ಕರ್ನಾಟಕ ವಾರ್ತೆ

ಮಹಿಳೆ ಮತ್ತು ಪಂಚವಾರ್ಷಿಕ ಯೋಜನೆಗಳು

ಟಿ. ಆರ್. ಚಂದ್ರಶೇಖರ್

ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು 'ಕಲ್ಯಾಣ ರಾಜ್ಯ' ವೊಂದನ್ನು ಸ್ಥಾಪಿಸುವ ಘನ ಉದ್ದೇಶವನ್ನು ಹೊಂದಿದೆ. ಈ ಕಾರಣಕ್ಕೆ ಮಹಿಳೆಯರನ್ನು ಸಮಾಜ ಕಲ್ಯಾಣದ ಅಂಗವಾಗಿ ಪರಿಭಾವಿಸಿಕೊಳ್ಳಲಾಯಿತೆ ವಿನಾ ಅಬಿವೃದ್ಧಿ ಅಂಗವಾಗಿಯಲ್ಲ ಎಂಬುದನ್ನು ಈಗಾಗಲೇ ಹೇಳಿಯಾಗಿದೆ. ಸ್ಕಾರಲೆಟ್ ಎಪಿಸ್ಟೀನ್ ಹೇಳುವಂತೆ (೧೯೯೬ : ೪೭) ಭಾರತದಲ್ಲಿ ಇಂದಿಗೂ ಮಹಿಳೆಯರ ಅಭಿವೃದ್ಧಿಕಾರ್ಯಕ್ರಮಗಳು ಮತ್ತು ಯೋಜನೆಗಳ ನಿರ್ವಹಣೆಯ ಜವಾಬುದಾರಿಯು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಕೈಗಾರಿಕಾ ಸಚಿವಾಲಯ ನಿರ್ವಹಣೆಯಲ್ಲ. ಸಮಾಜ ಕಲ್ಯಾಣ ಸಚಿವಾಲಯದ ವಶದಲ್ಲಿದೆ. ಸ್ವಾತಂತ್ರ್ಯನಂತರದ ಮೂರು ದಶಕಗಳಲ್ಲಿ ಸಾರ್ವಜನಿಕ ನೀತಿನಿರೂಪಣೆಯನ್ನು, ಕಾರ್ಯಕ್ರಮಗಳನ್ನು ನಿರ್ಧರಿಸುತ್ತಾ ಬಂದಿರುವ ಸಂಗತಿಯೆಂದರೆ ಪಂಚವಾರ್ಷಿಕ ಯೋಜನೆಗಳು. ಭಾರತದಲ್ಲಿ ಪಂಷವಾರ್ಷಿಕ ಯೋಜನೆಗಳು ಇಂದಿಗೂ ಯೋಜನೆಗಳಲ್ಲಿ ಮಹಿಳೆಯರು, ಅವರ ದುಡಿಮೆ, ಅವರ ಬದುಕು ಆಧ್ಯತೆಯ ಸಂಗತಿಯಾಗುವುದಿಲ್ಲ. ಭಾರತದಲ್ಲಿ ಅನಿರ್ಬಂಧಿತವಾಗಿ ಮುಂದುವರಿದಿರುವ ಲಿಂಗ ಸಂಬಂಧಿ ತಾರತಮ್ಯ ಮತ್ತು ಶೋಷಣೆಯನ್ನು ಅರ್ಥಮಾಡಿಕೊಳ್ಳಲು ನಾವು ಪಂಚವಾರ್ಷಿಕ ಯೋಜನೆಗಳನ್ನು ಲಿಂಗ ಸಂಬಂಧಿ ನೆಲೆಯಿಂದ ವಿಮರ್ಶೆ ಮಾಡಬೇಕಾಗುತ್ತದೆ.

ಮಹಿಳೆಯರ ಸ್ಥಾನಮಾನವನ್ನು ಉತ್ತಮಪಡಿಸುವುದು ಮತ್ತು ಅವರ ಅಭಿವೃದ್ಧಿ ಕುರಿತಂತೆ ಉಗ್ರವಾದ ಮತ್ತು ಸಂಘರ್ಷವಾದಿ ನೆಲೆಯುಳ್ಳ ಸಲಹೆ-ಸೂಚನೆಗಳು ಭಾರತದಲ್ಲಿ ೧೯೩೮-೪೦ ರಷ್ಟು ಹಿಂದಯೇ ರಾಷ್ಟ್ರಮಟ್ಟದಲ್ಲಿ ಮಂಡಿತವಾಗಿದ್ದವು. (ನಿರ್ಮಲ ಬ್ಯಾನರ್ಜಿ ೧೯೯೮ : WS ೨ : ಲೀಲಾ ಕಸ್ತೂರಿ ೧೯೯೬ : ೧೧೭). ಭಾರತದಲ್ಲಿ ಮಹಿಳೆಯರ ಅಂದಿನ ಸ್ಥಿತಿಗತಿಗಳ ಪೂರ್ಣ ಚಿತ್ರವನ್ನು ಕಾಂಗ್ರೆಸ್ ಪಕ್ಷವು ೧೯೩೮-೪೦ರಲ್ಲಿ ಸ್ಥಾಪಿಸಿದ್ಧ ಉಪಸಮಿತಿಯು ಸಿದ್ಧಪಡಿಸಿದ್ದವರದಿಯಲ್ಲಿ ನೀಡಲಾಗಿತ್ತು.

ಈ ವರದಿಯು ಸಮಾಜದ ಕೆಳ ವರ್ಗದ ಮಹಿಳೆಯರನ್ನು ಗಮನದಲ್ಲಿಟ್ಟು ಕೊಂಡು ತನ್ನ ಸಲಹೆ-ಸೂಚನೆಗಳನ್ನು ನೀಡಿತ್ತು. ಮಹಿಳಾ ದುಡಿಮೆಗಾರರು ಅನುಭವಿಸುತ್ತಿದ್ದತಾರತಮ್ಯ, ಸಾಮಾಜಿಕ ತಿರಸ್ಕಾರಗಳನ್ನು ಸಮಿತಿಯು ಸರಿಯಾಗೆ ಗುರುತಿಸಿತ್ತು. ಆದರೆ ಉಗ್ರ ವಿಚಾರಗಳಿಂದ ಪ್ರೇರಿತವಾಗಿದ್ದ ವರದಿಯು ಸ್ವಾತಂತ್ರ್ಯಾನಂತರದ ಅಭಿವೃದ್ಧಿ ಯೋಜನೆಗಳಿಗೆ ಬುನಾದಿಯಾಗಬೇಕಾಗಿತ್ತು. ಮಧ್ಯಮ ವರ್ಗದ ಹಿತಾಸಕ್ತಿಗಳಿಂದ ಪ್ರೇರಿತವಾಗಿದ್ದ ಕಾಂಗ್ರೆಸ್ ಪಕ್ಷ/ಸರ್ಕಾರವು ಮಹಿಳೆಯರ ಅಭಿವೃದ್ಧಿ ಕುರಿತಂತೆ ಸಂಘರ್ಷವಾದಿ-ಪರಿವರ್ತನ ಶೀಲ ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ಪ್ರತಿಯಾಗಿ ಪಂಚವಾರ್ಷಿಕ ಯೋಜನೆಗಳಲ್ಲಿ ಕಲ್ಯಾಣವಾದಿ ಸುಧಾರಣಾವಾದಿ ಧೋರಣೆಯನ್ನು ಆಧರಿಸಿ ಕಾರ್ಯಕ್ರಮ ರೂಪಿಸಿತು.

ಪಂಚವಾರ್ಷಿಕ ಯೋಜನೆಗಳು ಮಹಿಳೆಯರನ್ನು ಕೇವಲ ಅನುಭೋಗಿ ಘಟಕವೆಂದು ಪರಿಗಣಿಸಿದ್ದವು. ಅವರನ್ನು ಉತ್ಪಾದನಾ ಘಟಕವೆಂದು ಪರಿಗಣಿಸಲು ಅವು ಸಿದ್ಧವಿರಲಿಲ್ಲ. ಮಹಿಳೆಯರ ದೇಶದ ಶ್ರಮ ಶಕ್ತಿಯ °/ ರಷ್ಟಿದ್ದಾರೆ. ಅವರು ಅಭಿವೃದಿ ಮೂಲ ದ್ರವ್ಯವೆಂದು ೧೯೩೮-೪೦ ರಷ್ಟು ಹಿಂದೆಯೇ ಸಮಿತಿಯೊಂದು ತನ್ನ ವರದಿಯಲ್ಲಿ ತೋರಿಸಿ ಕೊಟ್ಟದ್ದರೂ ೧೯೫೦ರ ನಂತರ ಯೋಜನೆಗಳನ್ನು ರೂಪಿಸುವಾಗ ಅವರನ್ನು ಕೇವಲ ಅನುಭೋಗಿ ಘಟಕಗಳೆಂದು ಪರಿಭಾವಿಗಳನ್ನಾಗಿ ಮಾಡಲಾಯಿತು.

ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳಾ ಕಲ್ಯಾಣವನ್ನು ಸಮಾಜ ಕಲ್ಯಾಣದ ಅಂಗವಾಗಿ ಪರಿಭಾವಿಸಿಕೊಂಡು ಅಂತಹ ಕಾರ್ಯಕ್ರಮಗಳ ನಿರ್ವಹಣೆಯ ಜವಾಬುದಾರಿಯನ್ನು ಸ್ವಯಂಸೇವಾ ಸಂಸ್ಥೆಗಳಿಗೆ ನೀಡುವ ಮಾತನಾಡಲಾಗಿದೆ.

ಕಾಂಗ್ರೇಸ್ ಪಕ್ಷವು ದೇಶದಲ್ಲಿ ಮಹಿಳೆಯರ ಸ್ಥಿತಿಗತಿ ಹಾಗೂ ಅವರ ಅಭಿವೃದ್ಧಿಗೆ ಸಲಹೆ-ಸೂಚನೆ ನೀಡಲು ನೇಮಿಸಿದ್ಧ ಉಪಸಮಿತಿಯು ೧೯೩೮-೪೦ರಲ್ಲಿ 'ಯೋಜಿತ ಅಭಿವೃದ್ಧಿಯಲ್ಲಿಮಳೆಯರ ಪಾತ್ರ' ಎಂಬ ವರದಿಯನ್ನು ಸಿದ್ಧಪಡಿಸಿತು. ನಿರ್ಮಲ ಬ್ಯಾನರ್ಜಿ ತಿಳಿಸುವಂತೆ(೧೯೯೮) ಸ್ವಾತಂತ್ರ್ಯ ನಂತರ ನೆಹರೂ ಆಗಲಿ ಅಥವಾ ಯೋಜನಾ ಆಯೋಗವಾಗಲಿ ಮಹಿಳೆಯರ ಅಭಿವೃದ್ಧಿ ಸಂಗತಿಗಳನ್ನು ಅತ್ಯಂತ ಸೂಕ್ಷ್ಮವಾದ ರೀತಿಯಲ್ಲಿ ಗುರುತಿಸಿದ್ದ ಹಾಗೂ ಪರಿವರ್ತನಶೀಲ ಮತ್ತು ಸಂಘರ್ಷವಾದಿ ಸಲಹೆ ನೀಡಿದ್ದವರದಿಯನ್ನು ಅಭಿವೃದ್ಧಯೋಜನೆ ರೂಪಿಸಲು ಬಳಸಲೇ ಇಲ್ಲ. ಇದು ಒಂದು ದುರಂತ.

''ಮಹಿಳೆಯರ ಕಲ್ಯಾಣ ಕಾರ್ಯಕ್ರಮಗಳ ನಿರ್ವಹಣೆ ಜವಾಬುದಾರಿಯು ಸ್ವಯಂ ಸೇವಾ ಸಂಸ್ಥೆಗಳ ಮೇಲಿದೆ. ಸಮಾಜ ಕಲ್ಯಾಣ ಕಾರ್ಯಕ್ರಮದ ಮುಖ್ಯ ಅಂಗವೆಂದರೆ ಮಹಿಳೆಯರು ಮತ್ತು ಮಕ್ಕಳು. ಈ ಕಾರ್ಯಕ್ರಮಕ್ಕಾಗಿ ಯೋಜನೆಯಲ್ಲಿರೂ. ೪ ಕೋಟಿಯನ್ನು ಒದಗಿಸಲಾಗಿತ್ತು''.

(ನಿರ್ಮಲಾ ಬುಶ್) ೧೯೯೮:WS:೧೮-೧೯).

ಮೊದಲ ಪಂಚವಾರ್ಷಿಕ ಯೋಜನೆಯ (೧೯೫೨-೫೭) ಶಿಶುಗಳ ಹಾಗೂ ತಾಯಂದಿರ ಅಧಿಕ ಮರಣ ಪ್ರಮಾಣಕ್ಕೆ ಅಪೌಷ್ಟಿಕತೆಯೇ ಮುಖ್ಯ ಕಾರಣವೆಂದು ಗುರುತಿಸಿತು. ಅದಕ್ಕಾಗಿ ಶಾಲೆಗಳಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸೂಚಿಸಲಾಯಿತು. ತಾಯಿ ಮತ್ತು ಮಕ್ಕಳ ಆರೋಗ್ಯ ಕೇಂದ್ರ ಸ್ಥಾಪನೆಗೆ ಕ್ರಮ ತೆಗೆದುಕೊಳ್ಳಲಾಯಿತು. ಕುಟುಂಬ ಯೋಜನೆಗೆ ಒತ್ತುನೀಡಲಾಯಿತು.

ಎರಡನೆಯ ಪಂಚವಾರ್ಷಿಕ ಯೋಜನೆಯ ಸಮಾಜ

ಕಲ್ಯಾಣ ಕಾರ್ಯಕ್ರಮಗಳಲ್ಲಿ ಮಹಿಳೆಯರ ಬಗ್ಗೆ ಯಾವುದೇ ನಿರ್ದಿಷ್ಟ ಕಾರ್ಯಕ್ರಮವಿರಲಿಲ್ಲ. ಕೇಂದ್ರ ಸಮಾಜ ಕಲ್ಯಾಣ ಮಂಡಳಿಯ ಯೋಜನೆ-ಕಾರ್ಯಕ್ರಮಗಳಲ್ಲಿ ಮಹಿಳೆಯ ಮತ್ತು ಮಕ್ಕಳ ಅಭಿವೃದ್ಧಿಯನ್ನು ಸೇರಿಸಲಾಗಿತ್ತು. ಆರೋಗ್ಯ ಕಾರ್ಯಕ್ರಮದಲ್ಲಿ ಮಕ್ಕಳ ಯೋಜನೆಗೆ ಹೆಚ್ಚಿನ ಗಮನ ನೀಡಲಾಯಿತು.

ಮೂರನೆಯ ಪಂಚವಾರ್ಷಿಕ ಯೋಜನೆಯು ಬಾಲಕಿಯರ ಶಿಕ್ಷಣ ಹಾಗೂ ತಾಯಿ-ಮಗುವಿನ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿತು. ಸಮಾಜ ಕಲ್ಯಾಣ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಗಮನವನ್ನು ಗ್ರಾಮೀಣ ಪ್ರದೇಶದಲ್ಲಿ ಕಲ್ಯಾಣ ಕಾರ್ಯಕ್ರಮವನ್ನು ವಿಸ್ತರಿಸುವುದಕ್ಕೆ ಹಾಗೂ ವಯಸ್ಕ ಮಹಿಳೆಯರಿಗೆ ಶಿಕ್ಷಣ ಕಾರ್ಯಕ್ರಮಕ್ಕೆ ನೀಡಲಾಯಿತು. ಆರೋಗ್ಯ ಮತ್ತು ಶಿಕ್ಷಣದ ವಿಸ್ತರಣೆಗೆ ಅಗತ್ಯವಾದ ಉಪಾಧ್ಯಾಯರ ತರಬೇತಿ, ನರ್ಸ್‌ಗಳ ಆಯ್ಕೆ, ಎ. ಎನ್.ಎಮ್.ಗಳ ನೇಮಕ ಮುಂತಾದವುಗಳ ಬಗ್ಗೆ ಕ್ರಮ ಕೈಗೊಳ್ಳಲಾಯಿತು.

ನಾಲ್ಕನೆಯ ಪಂಚವಾರ್ಷಿಕ ಯೋಜನೆಯು ಮತ್ತೊಮ್ಮೆ ಬಾಲಕಿಯರ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿತು. ಸಮಾಜ ಕಲ್ಯಾಣವನ್ನು ಕುರಿತಂತೆ ಯೋಜನೆಯು ಸ್ವಯಂ ಸೇವಾ ಸಂಸ್ಥೆಗಳಿಗೆ ಅಧರ ಜವಾಬುದಾರಿಯನ್ನು ವಹಿಸುವುದರ ಬಗ್ಗೆ ಹೆಚ್ಚು ಆಸಕ್ತಿ ತೋರಿತು. ಸರ್ಕಾರವು ಕೇವಲ ಅನಾಥ ಹೆಣ್ಣುಮಕ್ಕಳನ್ನು ನೋಡಿಕೊಳ್ಳುವ ಸಂಸ್ಥೆಗಳನ್ನು ಮತ್ತು ವೇಶ್ಯಾವಾಟಿಕೆಯಿಂದ ರಕ್ಷಿಸಿಕೊಂಡು ಬಂದ ಮಹಿಳೆಯರ ಪುನರ್ವಸತಿ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುತ್ತಾ ಬಂದಿದೆ.

ಈ ಯೋಜನೆಯಲ್ಲಿ ಕುಟುಂಬ ಯೋಜನೆಯ ಮೇಲಿನ ಹಣಕಾಸು ವಿನಿಯೋಜನೆಯನ್ನು ಅಧಿಕಗೊಳಿಸಲಾಯಿತು. ಜನನ ಪ್ರಮಾಣವನ್ನು ೪೦ರಿಂದ ೨೫ಕ್ಕೆ ಇಳಿಸುವ ಗುರಿಯನ್ನು ನಿಗದಿಪಡಿಸಲಾಯಿತು. ಮಕ್ಕಳ ರೋಗ ನಿರೋಧಕ ಚುಚ್ಚುಮದ್ದು ಹಾಕುವ ಕಾರ್ಯಕ್ರಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಯಿತು.

ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯರಿಗೆ ಕೇವಲ ತರಬೇತಿ ನೀಡುವ ಕಾರ್ಯಕ್ರಮಕ್ಕೆ ಹೆಚ್ಚಿನ ಒತ್ತು ನೀಡಲಾಯಿತು. ಕಡಿಮೆ ವರಮಾನವುಳ್ಳ, ಮಕ್ಕಳನ್ನು ಸಾಕುವ ಜವಾಬುದಾರಿ ಹೊತ್ತ, ದುಡಿಯುವ ಹೆಣ್ಣು ಮಕ್ಕಳಿಗೆ ತರಬೇತಿ ನೀಡುವ ಕಾರ್ಯಕ್ರಮಕ್ಕೆ ಪ್ರೋತ್ಸಾಹ ನೀಡಲಾಯಿತು. ಗೃಹವಾರ್ತೆಯನ್ನು ಅಂದರೆ ಶಿಶುಪಾಲನೆ, ಪೌಷ್ಟಿಕ ಆಹಾರದ ತಯಾರಿಕೆ, ಆರೋಗ್ಯ ನಿರ್ವಹಣೆ, ಮನೆಯ ಖರ್ಚು,ವೆಚ್ಚಗಳ ನಿರ್ವಹಣೆ ಮುಂತಾದವುಗಳನ್ನು ಸಮರ್ಥವಾಗಿ ನಿರ್ವಹಿಸಲು ಗೃಹಿಣಿಗೆ ಅಗತ್ಯವಾದ ಶಿಕ್ಷಣ ಒದಗಿಸುವ ಕಾರ್ಯಕ್ರಮವನ್ನು ಇಲ್ಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮವು ೧೫ರಿಂದ ೪೫ ವರ್ಷ ವಯೋಮಾನದ ಮಹಿಳೆಯರನ್ನು ಒಳಗೊಂಡಿತ್ತು. ಗೃಹಕ್ಕೆಗಾರಿಕೆ, ಗ್ರಾಮೀಣ ಕೈಗಾರಿಕೆ, ಕರಕುಶಲಕಲೆಯಲ್ಲಿ ನಿರತರಾದ ಮಹಿಳೆಯರು ತಯಾರಿಸಿದ ಸರಕುಗಳ ಮಾರಾಟದ ವ್ಯವಸ್ಥೆಯನ್ನು ನೋಡಿಕೊಳ್ಳುವ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

ಮಹಿಳೆಯರ ದುಡಿಮೆಯನ್ನು ಕುರಿತಂತೆ ಐದನೆಯ ಪಂಚವಾರ್ಷಿಕ ಯೋಜನೆಯು ಹೀಗೆ ಗುರುತಿಸಿದೆ.

'ದುಡಿಮೆಗಾರರಲ್ಲಿ ಬಹುಪಾಲು ಕೃಷಿಯನ್ನು ಅವಲಂಬಿಸಿಕೊಂಡಿದ್ದಾರೆ. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯಲ್ಲಿ ಮಹಿಳಾ ದುಡಿಮೆಗಾರರ ಪಾತ್ರವೇನು, ಕೊಡುಗೆಯೇನು, ಸಾಮರ್ಥ್ಯವೇನು ಎಂಬುದನ್ನು ಸರಿಯಾಗಿ ಗುರುತಿಸುವುದು ಇನ್ನೂ ಸಾಧ್ಯವಾಗಿಲ್ಲ. ಕೃಷಿಗೆ ಸಂಬಂಧಿಸಿದಂತೆ ಅವರು ಅನೇಕ ಬಗೆಯ ಕೆಲಸಗಳನ್ನು ನಿರ್ವಹಿಸುತ್ತಿರುವುದರಿಂದ ಹಾಗೂ ಕೃಷಿಗೆ ಸಂಬಂಧಿಸಿದ ಅನೇಕ ಇತರೆ ದುಡಿಮೆಯನ್ನು ಅವರು ನಿಭಾಯಿಸುತ್ತಿರುವುದರಿಂದ ಅವರನ್ನು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಹೆಚ್ಚು ಗಟ್ಟಿಯಾಗಿ ತೊಡಗುವಂತೆ ಮಾಡಬೇಕು'(ಉಲ್ಲೇಖ: ಸ್ಕಾರಲೆಟ್ ಎಪಿಸ್ಟೀನ್ : (೧೯೯೬:೪೭)

ಆರನೆಯ ಪಂಚವಾರ್ಷಿಕ ಯೋಜನೆ : ಕ್ರಾಂತಿಕಾರಿ ಹೆಜ್ಜೆ

ಆರನೆಯ ಪಂಚವಾರ್ಷಿಕ ಯೋಜನೆ ರೂಪುಗೊಳ್ಳುವ ಸಮಯಕ್ಕಾಗಲೇ ಭಾರತದಲ್ಲಿ ಮಹಿಳಾಶಕ್ತಿ ನಿರ್ಣಾಯಕ ಸ್ಥಾನವನ್ನು ಪಡೆದುಕೊಂಡಿತ್ತು. ಮಹಿಳಾ ಚಳುವಳಿಯು ಅತ್ಯಂತ ಕ್ರಿಯಾಶೀಲವಾಗಿತ್ತು. ಮಹಿಳೆಯರ ಸ್ಥಾನಮಾನವನ್ನು ಕುರಿತು ಅಧ್ಯಯನ ಮಾಡಲು ಸರ್ಕಾರವು ನೇಮಿಸಿದ್ದ ಸಮಿತಿಯು 'ಟುವರ್ಡ್ಸ್ ಇಕ್ವಾಲಿಟಿ' ಎಂಬ ತನ್ನ ವರದಿಯನ್ನು ಪ್ರಕಟಿಸಿತ್ತು. ಈ ಎಲ್ಲದರ ಪರಿಣಾಮವೂ ಎನ್ನುವಂತೆ ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ 'ಮಹಿಳೆ ಮತ್ತು ಅಭಿವೃದ್ಧಿ' ಎಂಬ ಅಧ್ಯಾಯವನ್ನು ಕರಡಿನಲ್ಲಿ ಸೇರಿಸಲಾಯಿತು. ಹಿಂದಿನ ಯೋಜನೆಗಳಲ್ಲಿ ಮಹಿಳೆಯರ ಬದುಕನ್ನು ಉತ್ತಮ ಪಡಿಸಲು ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದರೂ ಅವರ ಸ್ಥಾನಮಾನ ಹಾಗೂ ಸ್ಥಿತಿಗತಿಗಳು ಅತ್ಯಂತ ಕೆಳಮಟ್ಟದಲ್ಲಿವೆ ಎಂಬುದನ್ನು ಆರನೇ ಯೋಜನೆ ಗುರುತಿಸಿತು.

'ಮಹಿಳೆಯರು ಸ್ವತಂತ್ರವಾಗಿ ದುಡಿಯುವ ಅವಕಾಶಗಳನ್ನು ಹಾಗೂ ವರಮಾನಗಳಿಸುವ ಅವಕಾಶಗಳನ್ನು ವರ್ಧಿಸದೆ ನಮ್ಮ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನವನ್ನು ಉತ್ತಮ ಪಡಿಸಲು ಸಾಧ್ಯವಿಲ್ಲ' ಎಂದು ಗುರುತಿಸಿದ ಯೋಜನೆಯು 'ಅವರ ಬದುಕು ಉತ್ತಮಗೊಳ್ಳಲು ಅವರ ಸಾಮಾಜಿಕ ಹಾಗೂ ಆರ್ಥಿಕ ಸಹಭಾಗಿತ್ವವನ್ನು ಮುಂದುವರಿಸಿಕೊಂಡು ಹೋಗಬೇಕು' ಎಂದು ಹೇಳಿತು.

ಪ್ರಥಮಬಾರಿಗೆ ಯೋಜನೆಯಲ್ಲಿ ಮಹಿಳೆಯರನ್ನು ಅಭಿವೃದ್ಧಿಯ ಮೂಲ ದ್ರವ್ಯವೆನ್ನುವುದನ್ನು ಒಪ್ಪಿಕೊಂಡಿದ್ದು ಇಲ್ಲಿ ಕಂಡುಬರುತ್ತದೆ. ಸಮಾಜಕ್ಕೆ ಹೊರೆಯಾಗಿರುವ ಮಹಿಳೆಯರನ್ನು 'ಅಯ್ಯೋ ಪಾಪ' ಎಂಬ ಔದಾರ್ಯವಾದಿ ದೃಷ್ಟಿಕೋನ ಮರೆಯಾಗಿ ದೇಶದ ಅಭಿವೃದ್ಧಿಗೆ ಮಹಿಳೆಯರ ಉತ್ಪಾದನಾ ಸಾಮರ್ಥ್ಯವನ್ನು ಉತ್ತಮಪಡಿಸುಬೇಕು ಎಂಬ ತಿಳುವಳಿಕೆ ಉಂಟಾದದ್ದು ತುಂಬಾ ಮಹತ್ವದ ಸಂಗತಿಯಾಗಿದೆ.

ಇಷ್ಟಾದರೂ ಸಹ ಯೋಜನೆಗಳು ಮಹಿಳೆಯರನ್ನು ಕುರಿತಂತೆ ಕಲ್ಯಾಣವಾದಿ-ಸುಧಾರಣಾವಾದಿ ಧೋರಣೆಯನ್ನು

ಸಂಪೂರ್ಣವಾಗಿ ತೊರೆಯುವ ಧೈರ್ಯ ಮಾಡಲಿಲ್ಲ. 'ಮಹಿಳೆ ಮತ್ತು ಅಭಿವೃದ್ಧಿ' ಎಂಬ ಅಧ್ಯಾಯವನ್ನುಹೊಂದಿದ ಮಹಿಳೆಯರಲ್ಲಿ ಬಹುಪಾಲು ಗೃಹವಾರ್ತೆಯಲ್ಲಿ ನಿರತರಾಗಿದ್ದಾರೆ ಎಂಬ ತಪ್ಪು ನಂಬಿಕೆ ಮಾತ್ರ ಮುಂದುವರಿಯಿತು. ಈ ಯೋಜನೆಯಲ್ಲಿ ಮಹಿಳೆಯರಿಗೆ ಪೌಷ್ಟಿಕ ಆಹಾರ ಸಿದ್ಧಪಡಿಸುವ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲು ಮಹಿಳಾ ಮಂಡಳಿಗಳಿಗೆ ಪ್ರೋತ್ಸಾಹ ನೀಡುವ ಕಾರ್ಯಕ್ರಮ ಸದರಿ ಯೋಜನೆಯಲ್ಲಿ ಮುಂದುವರಿಯಿತು. ಮಹಿಳೆಯರ ಅಭಿವೃದ್ಧಿಗಾಗಿ ವಿಶೇಷ ಉತ್ಪಾದನಾ-ಉದ್ಯೋಗ ಕಾರ್ಯಕ್ರಮಗಳನ್ನು ಸರ್ಕಾರವು ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳಬೇಕೆಂಬ ಅರಿವು ಯೋಜನೆಗಳಿಗೆ ಮೂಲವೇ ಇಲ್ಲ.

ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು:

ಆರನೆಯ ಪಂಚವಾರ್ಷಿಕ ಯೋಜನೆಯು ಕೊನೆಗೊಳ್ಳುವ ಹಂತದಲ್ಲಿ ಸರಿಯಾಗಿ ೧೯೮೫ರಲ್ಲಿ ಸರ್ಕಾರವು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವನ್ನು ಪ್ರಾರಂಭಿಸಿತು. ಮಹಿಳಾ ಕಲ್ಯಾಣ ಮತ್ತು ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವ ಮತ್ತು ಅನುಷ್ಠಾನಗೊಳಿಸುವ ಜವಾಬುದಾರಿಯನ್ನು ಸದರಿ ಸಚಿವಾಲಯದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಭಾಗಕ್ಕೆ ವಹಿಸಿಕೊಡಲಾಯಿತು. ಈ ವಿಭಾಗವು ಐದು ಉದ್ದೇಶಗಳನ್ನಿಟ್ಟುಕೊಂಡು ಮಹಿಳೆಯರ ಅಭಿವೃದ್ಧಗಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ.

೧) ಉದ್ಯೋಗದ ಅವಕಾಶಗಳನ್ನು ವಿಸ್ತರಿಸುವುದು ಹಾಗೂ ವರಮಾನಗಳಿಸುವ ಅವಕಾಶ ಒದಗಿಸುವುದು.

೨) ಶಿಕ್ಷಣ ಮತ್ತು ತರಬೇತಿ ಒದಗಿಸುವುದು.

೩) ಲಿಂಗ ಸಂಬಂಧಗಳಿಗೆ ಬಗ್ಗೆ ತಿಳುವಳಿಕೆ ಮತ್ತು ಜಾಗೃತಿಮಾಡಿಸುವುದು.

೪)ಮಹಿಳೆಯರ ಅಭಿವೃದ್ಧಿಗಾಗಿ ಪೂರಕ ಸೌಲಭ್ಯಗಳನ್ನು ಒದಗಿಸುವುದು,

೫) ಕಾನೂನಿನ ಬೆಂಬಲ ಒದಗಿಸುವುದು.

ಉದ್ಯೋಗ-ಉತ್ಪನ್ನ-ವರಮಾನ ವರ್ಧಿಸುವ ಕಾರ್ಯಕ್ರಮಗಳು :-

೧೯೫೨ರಲ್ಲಿ ಪ್ರಾರಂಭಿಸಲಾದ ಸಮುದಾಯ ಅಭಿವೃದ್ಧಿ ಕಾರ್ಯಕ್ರಮವು ಅಭಿವೃದ್ಧಿಯಲ್ಲಿ ಮಹಿಳೆಯರು ಸಮಾನ ನೆಲೆಯಲ್ಲಿ ಸಹಭಾಗಿಗಳಾಗುವಂತೆ ಮಾಡುವಲ್ಲಿ ವಿಫಲವಾಯಿತು. ಅದು ಉನ್ನತ ವರ್ಗದ ಪುರುಷರ ವರ್ಗಕ್ಕೆ ಅನುಕೂಲಗಳನ್ನು ಒದಗಿಸಿತು. ೧೯೭೦ರ ದಶಕದ ಪ್ರಾರಂಭದಲ್ಲಿ ಸರ್ಕಾರವು ನೇಮಿಸಿದ್ಧ ಮಹಿಳೆಯರ ಸ್ಥಾನಮಾನವನ್ನು ಕುರಿತ ಅಧ್ಯಯನ ಸಮಿತಿಯ 'ಟುವರ್ಡ್ಸ್ ಇಕ್ವಾಲಿಟಿ' ಎಂಬ ವರದಿ ಯನ್ನು ಸಿದ್ಧಪಡಿಸಿ 'ಮಹಿಳೆಯರು ಕಲ್ಯಾಣವಾದಿ ನೀತಿಯು ಫಲಾನುಭವಿಗಳಾಗುವಂತೆ ಮಾಡುವುದಕ್ಕೆ ಪ್ರತಿಯಾಗಿ ಅವರು ಅಭಿವೃದ್ಧಿಯ ನಿಯೋಗಿಗಳು ಮತ್ತು ಕರ್ತೃಗಳು ಎಂದು ಪರಿಗಣಿಸಬೇಕೆಂದು' ಕರೆ ನೀಡಿತು.(ಶಕುಂತಲಾ ನರಸಿಂಹನ್ ೧೯೯೯:೩೬)

ಆರನೆಯ ಯೋಜನೆಯಲ್ಲಿ ಗ್ರಾಮೀಣ ಮಹಿಳೆಯರ ಅಭಿವೃದ್ಧಿಯು ಹೆಚ್ಚಿನ ಆದ್ಯತೆ ಪಡೆಯಿತು. ಐರ್‌ಡಿಪಿ: ಇಂಟಿಗ್ರೇಟೆಡ್ ರೂರಲ್ ಡವಲಪ್‌ಮೆಂಟ್ ಪ್ರೋಗ್ರಾಮ (IRDP) ಡ್ವಾಕ್ರಾ : ಡೆವೆಲಪ್‌ಮೆಂಟ್ ಅಫ್ ವುಮೆನ್ ಆಂಡ್ ಚಿಲ್ಡ್ರನ್ ಆರ್ ರೂರಲ್ ಎರಿಯಾಸ್ (DWCRA) ಟ್ರೈಸೆಮ : ಟ್ರೈನಿಂಗ್ ಆಫರೂರಲ್ ಯೂತ್ಸ್ ಫಾರ್‌ಸೆಲ್ಫ್ ಎಂಪ್ಲಾಯಿಮೆಂಟ್ (TRYSEM)

ಕಾರ್ಯಕ್ರಮಗಳು ಆರನೆಯ ಯೋಜನೆಯಲ್ಲಿ ಜಾರಿಗೆ ಬಂದವು. ಎನ್ ಆರ್ ಈ ಪಿ. ಆರ್ ಎಲ್ ಈಜಿಪಿ, ಜವಾಹರ್ ರೋಜಗಾರ್ ಯೋಜನೆ, ಶ್ರಮ ಶಕ್ತಿ ಉದ್ಯೋಗ ಭರವಸೆ ಯೋಜನೆ ಮುಂತಾದವು ಉದ್ಯೋಗಕ್ಕೆ ಆದ್ಯತೆ ನೀಡಿದ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು ಆರಂಭಗೊಂಡವು.

ಉದ್ಯೋಗ ಸಾಂದ್ರ ಯೋಜನೆಗಳಲ್ಲಿ ಕನಿಷ್ಟ ಇಂತಿಷ್ಟು ಭಾಗ ಮಹಿಳೆಯರಿಗೆ ಉದ್ಯೋಗ ಒದಗಿಸಬೇಕೆಂಬ ನಿಯಮವನ್ನು ಮಾಡಲಾಯಿತು. ಇಷ್ಟಾದರೂ ಮಹಿಳೆಯರಿಗೆ ಆದ್ಯತೆ ನೀಡಬೇಕೆಂಬುದು ಕೇವಲ ಕಾಟಾಚಾರದ ಸಂಗತಿಯಾಯಿತೇ ವಿನಾ ನಿಜವಾಗಿ ಲಿಂಗ ಸಂವೇದಿ ಬದ್ಧತೆಯಿಂದ ಯಾವುದೇ ಕಾರ್ಯಕ್ರಮ ರೂಪಗೊಳ್ಳಲಿಲ್ಲ ಮತ್ತು ಅನುಷ್ಠಾನಗೊಳ್ಳಲಿಲ್ಲ. ಉದಾಹರಣೆಗೆ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಗಾಗಿಯೆ ಪ್ರಾರಂಭಿಸಿದ ಡ್ವಾಕ್ರಾ ಯೋಜನೆಯು ಯಾವುದೇ ವಿಧದಲ್ಲೂ ಮಹಿಳೆಯರ ಬದುಕನ್ನು ಉತ್ತಮಪಡಿಸುವಲ್ಲಿ ಯಶಸ್ವಿಯಾಗಲಿಲ್ಲ. ೧೯೮೬-೮೭ರಲ್ಲಿ ಡ್ವಾಕ್ರಾ ಯೋಜನೆಯ ಪೋಷಕ ಸಂಸ್ಥೆಯಾಗಿದ್ದ ಯೂನಿಸೆಫ್ (UNICEF) ಯೋಜನೆಯಿಂದ ಹಿಂದೆ ಸರಿಯಿತು IRDP,NREP,JRY,DWCRA,RLEGP,TRYSEM -ಹೀಗೆ ಉದ್ಯೋಗ ಸಾಂದ್ರ ಕಾರ್ಯಕ್ರಮಗಳೆಲ್ಲವೂ ೧೯೯೦ರ ದಶಕದಲ್ಲಿ ಕಡಿತಕ್ಕೆ ಒಳಗಾದವು. ಸಪೋರ್ಟ್ ಫಾರ್ ಎಂಪ್ಲಾಯಮೆಂಟ್ ಆಫ್ ವುಮೆನ್ (STEP)ಎಂಬ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಯಲ್ಲಿ ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಭಾಗವು ಪ್ರಾರಂಭಿಸಿತು. ನಿರೀಕ್ಷಿಸಿದ ಮಟ್ಟದಲ್ಲಿ ಅದು ಕಾರ್ಯವೆಸಗಲಾಗಲಿಲ್ಲ.

ಶಕುಂತಲಾ ನರಸಿಂಹನ್ (೧೯೯೯:೪೦) ಹೇಳುವಂತೆ ಕೇಂದ್ರ ಸಮಾಜ ಕಲ್ಯಾಣ ಮಂಡಳಿಯ ಮಹಿಳಾ ಮಂಡಳಿಗಳಿಗೆ ನೀಡುವ ಅನುದಾನವು ನಿಯಮ, ಷರತ್ತುಗಳು, ಠೇವಣಿ, ಲೆಕ್ಕಾಚಾರ ಮುಂತಾದವುಗಳಿಂದ ತುಂಬಿ ಹೋಗಿರುವುದರಿಂದ ಮಹಿಳಾ ಮಂಡಳಿಗಳು ಅದರಿಂದ ಅನುದಾನ ಪಡೆಯಲು ಹಿಂಜರಿಯುತ್ತವೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮಹಿಳೆಯರ ಅಭಿವೃದ್ಧಿಗಾಗಿ ಹಮ್ಮಿ ಕೊಂಡಿರುವ ಕಾರ್ಯಕ್ರಮಗಳು ಸಂಪೂರ್ಣವಾಗಿ ವಿಫಲಗೊಂಡಿವೆ. ಇಂದಿಗೂ ಮಹಿಳೆಯರ ಅಭಿವೃದ್ಧಿಯನ್ನು ಸರ್ಕಾರ ಮತ್ತು ಪಂಚವಾರ್ಷಿಕ ಯೋಜನೆಗಳು 'ಕಲ್ಯಾಣವಾದಿ' ನೆಲೆಯಲ್ಲಿ ನೋಡುತ್ತಿದ್ದಾವೆಯೇ ವಿನಾ ಸಂಘರ್ಷವಾದಿ ನೆಲೆಯಲ್ಲಿ ಸಮಾನತೆ ನೆಲೆಯಲ್ಲಿ, ಸಾಮಾಜಿಕ ನ್ಯಾಯದ ನೆಲೆಯಲ್ಲಿ ನೋಡುತ್ತಿಲ್ಲ.

ಸಮ್ಮೇಳನದಲ್ಲಿ ಸೆನ್ಸಾರ್ ಆದ ಮಹಿಳೆಯರು

''ಅನಂತಮೂರ್ತಿಯವರೇ, ಮಹಿಳೆಯರ ಮೇಲಿನ ಸೆನ್ಸಾರ್ ನೀತಿ ನಿಮಗರಿವಿಲ್ಲದೆ ನಿಮ್ಮೊಳಗಿದೆ. ಯಾಕೆ ಒಂದು ಭಾಗವನ್ನು ಮೌನಕ್ಕೆ ಒಪ್ಪಿಸಿಬಿಟ್ಟಿದ್ದೀರಾ'', 69ನೇ ಅಖಿಲ ಭಾರತ ಸಾಹಿತ್ಯಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರಾದ ಶ್ರೀ ಯು.ಆರ್. ಅನಂತಮೂರ್ತಿಯವರಿಗೆ ಸಂವಾದ ಕಾರ್ಯಕ್ರಮದಲ್ಲಿ ಲೇಖಕಿ ವೈದೇಹಿಯವರು ಕೇಳಿದ ಪ್ರಶ್ನೆಯಿದು. ಈ ಪ್ರಶ್ನೆ ಒಟ್ಟು ಸಮ್ಮೇಳನವು ಲೇಖಕಿಯರನ್ನು ಕುರಿತಂತೆ ತಳೆದ ನಿಲುವಿನ ಸಾಂಕೇತಿಕ ಅಭಿವ್ಯಕ್ತಿಯಾಗಿತ್ತು.

ಒಟ್ಟಾರೆಯಾಗಿ ಸಮ್ಮೇಳನದ ಗೋಷ್ಠಿಗಳು ಈ ಮಾತನ್ನು ದೃಢಪಡಿಸಿದವು, ಸಮಕಾಲೀನ ಸಾಹಿತ್ಯ ಚಳುವಳಿಗಳು ಮತ್ತುಸಮಕಾಲೀನ ಸಾಹಿತ್ಯ ವಿಮರ್ಶೆಯ ನೆಲೆಗಳು - ಈ ಎರಡೂ ಗೋಷ್ಠಿಗಳಲ್ಲಿ ಸ್ತ್ರೀವಾದಿ ಸಾಹಿತ್ಯ ಚಳುವಳಿ ಮತ್ತು ಸ್ತ್ರೀವಾದಿ ವಿಮರ್ಶೆಯ ಚರ್ಚೆಯಾಗಬಹುದೆಂದು ಊಹಿಸಿದ್ದವರಿಗೆ ಭಾರಿ ನಿರಾಸೆಯಾಯಿತು. ಈ ಗೋಷ್ಠಿಗಳಲ್ಲಿ ಪ್ರಬಂಧ ಮಂಡಿಸಿದವರು ಪ್ರಗತಿಪರ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರಾಗಿದ್ದವರೇ. ಅವರ ಪ್ರಗತಿಪರತೆ ಸ್ತ್ರೀಯರ ವಿಷಯದಲ್ಲಿ ಹೇಗೆ ಕುರುಡಾಗುತ್ತದೆ ಎಂಬುದು ಆಶ್ಚರ್ಯ ಹುಟ್ಟಿಸಿತಲ್ಲದೆ ಕನ್ನಡ ಸಾಹಿತ್ಯದ ಪ್ರಧಾನ ಪರಂಪರೆಯು ಒಟ್ಟಾರೆಯಾಗಿ ಹೆಣ್ಣಿನ ಬಗ್ಗೆ ತೋರಿಸುವ ದಿವ್ಯ ನಿರ್ಲಕ್ಷ್ಯದ ಕೈಗನ್ನಡಿಯಾಗಿತ್ತು, ಈ ಸಮ್ಮೇಳನ.

RNI No. 45577/88

CPMG/KA/BG-8/2002
Book-Post/News Letter

To :

Smt/Sri

"Achala" 108, Skyline Surabhi,
14-9, Vidyapeeta Road, BSK III Stage,
Bangalore - 560 085